# ಡಾ. ವಿಕ್ರಂ ಸಾರಾಭಾಯಿ

ಪ್ರಿಯಾಂಕ ವಿ



ಬಾಲಬಾಲೆಯರಿಗೆ ಬಾಹ್ಯಾಕಾಶ ಪುಸ್ತಕ ಮಾಲೆ

ಯು ಆರ್ ರಾವ್ ಉಪಗ್ರಹ ಕೇಂದ್ರ, ಬೆಂಗಳೂರು–17

# ಡಾ. ವಿಕ್ರಂ ಸಾರಾಭಾಯಿ

ಪ್ರಿಯಾಂಕ ವಿ

ಬಾಲಬಾಲೆಯರಿಗೆ ಬಾಹ್ಯಾಕಾಶ ಪುಸ್ತಕ ಮಾಲೆ

ಯು ಆರ್ ರಾವ್ ಉಪಗ್ರಹ ಕೇಂದ್ರ, ಬೆಂಗಳೂರು–17

“Dr. Vikram Sarabhai”
in Kannada by Priyanka V,
*Published by*
U R Rao Satellite Centre
Bengaluru-560017
kannada.ursc@gmail.com

ಬಾಲಬಾಲೆಯರಿಗೆ ಬಾಹ್ಯಾಕಾಶ ಪುಸ್ತಕ ಮಾಲೆ
ಯು ಆರ್ ರಾವ್ ಉಪಗ್ರಹ ಕೇಂದ್ರ,
ಬೆಂಗಳೂರು–560017

© ಲೇಖಕರದು

ಮೊದಲ ಮುದ್ರಣ : 2022
ಬಳಸಿದ ಕಾಗದ : 70 ಜಿ.ಎಸ್.ಎಂ. ಮ್ಯಾಪ್‌ಲಿಥೊ
ಡೆಮಿ 1/8, ಪುಟಗಳು: 44

ಚಿತ್ರ ಕೃಪೆ : ಇಸ್ರೊ ಮತ್ತು ಇತರ ಜಾಲತಾಣಗಳು

# ಅಧ್ಯಕ್ಷರ ಸಂದೇಶ



ವಿಜ್ಞಾನ ಸಾಹಿತ್ಯ, ಕನ್ನಡ ಭಾಷೆಯ ಒಂದು ಪ್ರಮುಖ ಹಾಗೂ ವಿಶಿಷ್ಟವಾದ ಸಾಹಿತ್ಯ ಪ್ರಕಾರ. ನಮ್ಮ ಸುತ್ತಲಿನ ಎಲ್ಲ ಆಗುಹೋಗುಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಗಮನಿಸಿ, ಅದನ್ನು ಸರಳ ಕನ್ನಡ ಭಾಷೆಯಲ್ಲಿ ವಿವರಿಸುವ ಆಶಯ ಈ ವಿಜ್ಞಾನ ಸಾಹಿತ್ಯದ ಗುರಿ. ಅದರಲ್ಲೂ, ಕಬ್ಬಿಣದ ಕಡಲೆ ಎನಿಸಿರುವ ಖಗೋಳ ವಿಜ್ಞಾನ, ಉಪಗ್ರಹ ಹಾಗೂ ರಾಕೆಟ್ ತಂತ್ರಜ್ಞಾನ ಮುಂತಾದ ಸಂಕೀರ್ಣ ತಂತ್ರಜ್ಞಾನಗಳ ಬಗ್ಗೆ ಸರಳ ಕನ್ನಡದಲ್ಲಿ ಒಬ್ಬ ಪ್ರೌಢಶಾಲಾ ವಿದ್ಯಾರ್ಥಿಯ ತಿಳುವಳಿಕೆಯ ಮಟ್ಟದಲ್ಲಿ ತಿಳಿಸಲು ಸಾಧ್ಯವಾದರೆ ಅದೊಂದು ಅಪರೂಪದ ಸಾಧನೆಯೇ ಸರಿ. ಈ ನಿಟ್ಟಿನಲ್ಲಿ ಬೆಂಗಳೂರಿನ ಪ್ರತಿಷ್ಠಿತ ಸಂಶೋಧನಾ ಸಂಸ್ಥೆಯಾದ ಯು ಆರ್ ರಾವ್ ಉಪಗ್ರಹ ಕೇಂದ್ರವು "ಬಾಲಬಾಲೆಯರಿಗೆ ಬಾಹ್ಯಾಕಾಶ ಪುಸ್ತಕ ಮಾಲೆ" ಎಂಬ ನೂತನ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿದ್ದು, ತನ್ಮೂಲಕ "ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಬಾಹ್ಯಾಕಾಶ

ವಿಜ್ಞಾನಿಗಳ" ಬಗ್ಗೆ ಸಣ್ಣ ಪುಸ್ತಕಗಳನ್ನು ಹೊರತರುವ ಯೋಜನೆ ಹೊಂದಿದೆ. ಪ್ರಸ್ತುತ ನಿಮ್ಮ ಕೈಯಲ್ಲಿರುವ ಈ ಪುಸ್ತಕ, ಈ ಮಾಲೆಯ ಒಂದು ಕುಸುಮ. ಕನ್ನಡ ವಿಜ್ಞಾನ ಸಾಹಿತ್ಯವನ್ನು ಶ್ರೀಮಂತಗೊಳಿಸುವ ದಿಕ್ಕಿನಲ್ಲಿ ಇದೊಂದು ಮಹತ್ವಪೂರ್ಣ ಹೆಜ್ಜೆ.

ಒಂದು ಭಾಷೆಯ ಉನ್ನತ ಮಟ್ಟದ ಬೆಳವಣಿಗೆ ಸಾಧ್ಯವಾಗಬೇಕಾದರೆ, ವಿವಿಧ ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯಗಳನ್ನು ಆ ಭಾಷೆಯಲ್ಲೇ ವಿವರಿಸಬೇಕಾದದ್ದು ಅವಶ್ಯಕ. ಅಂತೆಯೇ ನಮ್ಮ ಇಸ್ರೊ ಸಂಸ್ಥೆಯ ವೈಜ್ಞಾನಿಕ ಸಾಧನೆಗಳನ್ನು ಜನಸಾಮಾನ್ಯರಿಗೆ ಸರಳ ಭಾಷೆಯಲ್ಲಿ ವಿವರಿಸಿ, ಅದರ ಬಗೆಗಿನ ಅರಿವು ಮೂಡಿಸುವುದೂ ಕೂಡಾ ಅಗತ್ಯವಾಗಿ ಮಾಡಬೇಕಾಗಿರುವ ಕಾರ್ಯ. ಪ್ರಸ್ತುತ "ಬಾಲಬಾಲೆಯರಿಗೆ ಬಾಹ್ಯಾಕಾಶ ಪುಸ್ತಕ ಮಾಲೆ" ಯೋಜನೆಯು, ಈ ಎರಡೂ ಅವಶ್ಯಕತೆಗಳನ್ನು ಈಡೇರಿಸಲಿದೆ.

ಈ ಕಾರ್ಯಕ್ರಮವನ್ನು ಪರಿಕಲ್ಪಿಸಿ, ಅದನ್ನು ಸಾಕಾರಗೊಳಿಸಿದ್ದಕ್ಕಾಗಿ ಉಪಗ್ರಹ ಕೇಂದ್ರದ ನಿರ್ದೇಶಕರನ್ನು ನಾನು ಅಭಿನಂದಿಸುತ್ತೇನೆ. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಪುಸ್ತಕಗಳು ಹೊರಬರಲಿ, ಇನ್ನೂ ಹೆಚ್ಚಿನ ಆಸಕ್ತ ಓದುಗರನ್ನು ತಲುಪಲಿ ಎಂದು ಹಾರೈಸುತ್ತೇನೆ

**ಎಸ್ ಸೋಮನಾಥ್**

**ಅಧ್ಯಕ್ಷರು, ಇಸ್ರೊ**

# ನಿರ್ದೇಶಕರ ಸಂದೇಶ



ಉಪಗ್ರಹ, ಬಾಹ್ಯಾಕಾಶ ವಿಜ್ಞಾನ, ತಂತ್ರಜ್ಞಾನ ಹಾಗೂ ಸಂಬಂಧಿತ ವಿಷಯಗಳನ್ನು ಸರಳವಾದ ಪ್ರಾದೇಶಿಕ ಭಾಷೆಯಲ್ಲಿ ಎಲ್ಲರಿಗೂ ಸುಲಭವಾಗಿ ಅರ್ಥವಾಗುವ ಹಾಗೆ ತಲುಪಿಸಬೇಕು ಎನ್ನುವುದು ನನ್ನ ಚಿಂತನೆ ಹಾಗೂ ಆಶಯ. ಇಂತಹ ಪ್ರಯತ್ನವು ವಿಶೇಷವಾಗಿ ಪ್ರಾದೇಶಿಕ ಭಾಷೆಯಲ್ಲೇ ಓದುವ ಗ್ರಾಮೀಣ ಪ್ರದೇಶದ ಯುವ ಪ್ರತಿಭೆಗಳಿಗೆ ಅವಶ್ಯಕ ಹಾಗೂ ಅಧಿಕೃತ ಮಾಹಿತಿ ತಲುಪಿಸುತ್ತದೆ. ತನ್ಮೂಲಕ ಅವರಿಗೆ ಉತ್ತಮ ಅವಕಾಶ ಕಲ್ಪಿಸುವಲ್ಲಿ ಹಾಗೂ ಭವ್ಯ ಭವಿಷ್ಯ ರೂಪಿಸಿಕೊಳ್ಳುವಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ.

ಈ ತಂತ್ರಜ್ಞಾನ ಕ್ಷೇತ್ರದಲ್ಲಿ ಐದು ದಶಕಗಳಿಂದ ಕಾರ್ಯ ನಿರ್ವಹಿಸುತ್ತಿರುವ ಯು ಆರ್ ರಾವ್ ಉಪಗ್ರಹ ಕೇಂದ್ರದ ನುರಿತ ಹಾಗೂ ಅನುಭವಿ ವಿಜ್ಞಾನಿಗಳಿಂದ ಈ ಕೆಲಸ ಆಗಬೇಕು ಎಂಬುವುದು ಸಹಜ ಅಪೇಕ್ಷೆ. ಇದರ ಅಂಗವಾಗಿ

ಯು ಆರ್ ರಾವ್ ಉಪಗ್ರಹ ಕೇಂದ್ರವು "ಬಾಲಬಾಲೆಯರಿಗೆ ಬಾಹ್ಯಾಕಾಶ ಪುಸ್ತಕಮಾಲೆ"ಯನ್ನು ಹೊರತರುತ್ತಿದೆ.

ಈ ವಿಚಾರಕ್ಕೆ ಸ್ಪಂದಿಸಿ ಅತ್ಯಂತ ಉತ್ಸುಕತೆಯಿಂದ ನಮ್ಮ ಸಹೋದ್ಯೋಗಿಗಳು ಈ ವಿಷಯಗಳ ಬಗ್ಗೆ ಕಿರುಪುಸ್ತಕಗಳನ್ನು ರಚಿಸುತ್ತಿದ್ದಾರೆ. ಈ ಸರಣಿಯ ಏಳು ಪುಸ್ತಕಗಳು ಇಂದು ನಿಮ್ಮ ಕೈ ಸೇರಿರುವುದು ಸಂತಸದ ಸಂಗತಿ. ಅವರ ಈ ಪ್ರಯತ್ನಕ್ಕೆ ಅಭಿನಂದನೆಗಳು ಹಾಗೂ ಯೋಜನೆ ಸಫಲವಾಗಲಿ ಎಂದು ನನ್ನ ಹಾರೈಕೆ. ವಿದ್ಯಾರ್ಥಿಗಳು ಈ ವಿಷಯಗಳಲ್ಲಿ ಆಸಕ್ತಿ ಹಾಗೂ ಅಭಿರುಚಿಯನ್ನು ಬೆಳೆಸಿಕೊಂಡು, ಮೂಲತತ್ವಗಳನ್ನು ಅರಿತುಕೊಂಡು, ಆಳವಾದ ಜ್ಞಾನವನ್ನು ಪಡೆದುಕೊಂಡು, ಸ್ಫೂರ್ತಿ ಪಡೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳಲಿ, ತನ್ಮೂಲಕ ದೇಶದ ಅಭಿವೃದ್ಧಿ ಹಾಗೂ ಸಮಾಜದ ಸರ್ವತೋನ್ಮುಖ ಬೆಳವಣಿಗೆ ಆಗಲಿ ಎಂದು ಹಾರೈಸುತ್ತೇನೆ. ಈ ನಮ್ಮ ಉದ್ದೇಶ ಸಾಕಾರಗೊಂಡು, ಅಪೇಕ್ಷಿತ ಫಲಿತಾಂಶ ದೊರೆಯುತ್ತದೆ ಎಂಬುದರಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ.

**ಎಂ. ಶಂಕರನ್**

**ನಿರ್ದೇಶಕರು**

**ಯು ಆರ್ ರಾವ್ ಉಪಗ್ರಹ ಕೇಂದ್ರ**

# ಸಂಪಾದಕ ಮಂಡಲಿ

## ಬಾಲಬಾಲೆಯರಿಗೆ ಬಾಹ್ಯಾಕಾಶ ಪುಸ್ತಕಮಾಲೆ

ಪ್ರಿಯ ಓದುಗರೇ,

ಇಸ್ರೊ ಸಂಸ್ಥೆಯ ಯು ಆರ್ ರಾವ್ ಉಪಗ್ರಹ ಕೇಂದ್ರವು (ಯುಆರ್ಎಸ್ಸಿ) 2022ರಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ. ಈ ಸಂದರ್ಭದಲ್ಲಿ, ಯುಆರ್ಎಸ್ಸಿಯ ಕರ್ನಾಟಕ ರಾಜ್ಯೋತ್ಸವ ಸಮಿತಿಯು, 'ಬಾಲಬಾಲೆಯರಿಗೆ ಬಾಹ್ಯಾಕಾಶ ಪುಸ್ತಕ ಮಾಲೆ' ಎಂಬ ಕನ್ನಡ ಪುಸ್ತಕ ಸರಣಿಯನ್ನು ಪ್ರಕಟಿಸುವ ಕಾರ್ಯವನ್ನು ಹಮ್ಮಿಕೊಂಡಿದೆ. ಬಾಹ್ಯಾಕಾಶ ವಿಜ್ಞಾನ, ವಿಜ್ಞಾನಿಗಳು, ರಾಕೆಟ್ ಮತ್ತು ಉಪಗ್ರಹ ತಂತ್ರಜ್ಞಾನ, ಮುಂತಾದ ಹಲವು ವಿಷಯಗಳ ಬಗ್ಗೆ ಶಾಲಾ ಮಕ್ಕಳಿಗೆ ಸುಲಭವಾಗಿ ಅರ್ಥವಾಗುವಂತೆ, ಸರಳ ಕನ್ನಡ ಭಾಷೆಯಲ್ಲಿ ಚಿಕ್ಕಚಿಕ್ಕ ಪುಸ್ತಕಗಳನ್ನು ಪ್ರಕಟಿಸುವ ಯೋಜನೆ ನಮ್ಮ ಸಮಿತಿಯದು. ಇವುಗಳನ್ನು ನಮ್ಮ ಸಂಸ್ಥೆಯ ವಿಜ್ಞಾನಿಗಳೇ ಬರೆಯುತ್ತಿರುವುದು ಇದರ ಇನ್ನೊಂದು ವಿಶೇಷ. ಈ ಮಾಲಿಕೆಯ ಮೊದಲ ಕಂತಾಗಿ, ಏಳು ಪುಸ್ತಕಗಳು ಇದೀಗ ನಿಮ್ಮ ಮುಂದಿವೆ. ಈ ಪುಸ್ತಕಗಳ ವಿದ್ಯುನ್ಮಾನ ಆವೃತ್ತಿಯನ್ನು ನಮ್ಮ ಅಂತರ್ಜಾಲ ತಾಣದ ಮೂಲಕ ಉಚಿತವಾಗಿ ಎಲ್ಲಾ ಮಕ್ಕಳಿಗೂ ತಲುಪಿಸುವ ಗುರಿ ನಮ್ಮದು.

ಈ ಯೋಜನೆಯ ಮುಖ್ಯ ರೂವಾರಿಯಾದ ನಮ್ಮ ಕೇಂದ್ರದ ನಿರ್ದೇಶಕರಾದ ಶ್ರೀ. ಎಂ ಶಂಕರನ್ ಅವರಿಗೆ ನಮ್ಮ ಸಮಿತಿಯು ಆಭಾರಿಯಾಗಿದೆ. ಈ ಸರಣಿಯ ಪುಸ್ತಕಗಳನ್ನು ಪರಿಶೀಲಿಸಿ, ಸೂಕ್ತ ಸಲಹೆಗಳನ್ನು ನೀಡಿದ ಶ್ರೀ ಹೆಚ್ ಎನ್ ಸುರೇಶ್ ಕುಮಾರ್, ಶ್ರೀ ಕೆ ವಿ ಗೋವಿಂದ, ಡಾ. ಎಂ ರವೀಂದ್ರ ಅವರುಗಳಿಗೆ ನಮ್ಮ ಹೃದಯಪೂರ್ವಕ ಧನ್ಯವಾದಗಳು. ಇಂತಹ ಕಠಿಣ ವಿಜ್ಞಾನ ವಿಚಾರಗಳನ್ನು ಸರಳಭಾಷೆಯಲ್ಲಿ, ಅದರಲ್ಲೂ ಕನ್ನಡದಲ್ಲಿ, ಬರೆಯುವುದು ದೊಡ್ಡ ಸವಾಲೇ ಸರಿ. ಈ ಸವಾಲನ್ನು ಸ್ವೀಕರಿಸಿ, ತಮ್ಮ ಕಾರ್ಯಗಳ ನಡುವೆ ಬಿಡುವು ಮಾಡಿಕೊಂಡು, ಪುಸ್ತಕಗಳನ್ನು ಬರೆದು, ಸೂಕ್ತ ಸಮಯಕ್ಕೆ ನಮಗೆ ತಲುಪಿಸಿದ ಎಲ್ಲಾ ಲೇಖಕರಿಗೂ ನಾವು ಕೃತಜ್ಞರಾಗಿದ್ದೇವೆ. ಪುಸ್ತಕಗಳನ್ನು ಹೊರತರಲು ಸಹಕರಿಸಿದ ನಮ್ಮ ಕೇಂದ್ರದ ಎಲ್ಲಾ ಸಹೋದ್ಯೋಗಿಗಳಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇವೆ.

ಇವುಗಳನ್ನು ಓದಿ, ನಿಮ್ಮ ಸಲಹೆ ಮತ್ತು ಅಭಿಪ್ರಾಯಗಳನ್ನು ತಿಳಿಸಿದರೆ, ಈ ಪುಸ್ತಕ ಮಾಲೆಯ ಮುಂದಿನ ಪುಸ್ತಕಗಳನ್ನು ಇನ್ನಷ್ಟು ಉತ್ತಮಪಡಿಸಲು ಸಾಧ್ಯವಾಗುತ್ತದೆ.

**ರಾಮನಗೌಡ ವಿ ನಾಡಗೌಡ**

**ಅಧ್ಯಕ್ಷರು**

# ಲೇಖಕರ ಮಾತು

ಬಾಲ ಬಾಲೆಯರಿಗೆ ಬಾಹ್ಯಾಕಾಶ ವಿಜ್ಞಾನದ ಮೂಲಭೂತ ಅಂಶಗಳನ್ನು ತಿಳಿಸುವ ಸಲುವಾಗಿ ಇಸ್ರೊ ಸಂಸ್ಥೆಯ ಯು.ಆರ್.ರಾವ್ ಉಪಗ್ರಹ ಕೇಂದ್ರವು ಕಿರುಪುಸ್ತಕಗಳನ್ನು ಪ್ರಕಟಿಸುತ್ತಿರುವ ಈ ಪ್ರಯತ್ನದಲ್ಲಿ ಇಸ್ರೊ ಬಗ್ಗೆಯೇ ಮಕ್ಕಳಿಗೆ ಪರಿಚಯ ಮಾಡಿಕೊಡುವುದು ಈ ಪುಸ್ತಕದ ಉದ್ದೇಶವಾಗಿದೆ.

ಇಸ್ರೋ ಸಂಸ್ಥೆಯ ಸ್ಥಾಪನೆಗೆ ಕಾರಣರಾದ ಮೂಲಪುರುಷರಾದ ಡಾ. ವಿಕ್ರಂ ಸಾರಾಭಾಯಿಯವರ ಕಿರು ಪರಿಚಯವನ್ನು ಈ ಪುಸ್ತಕ ನೀಡುತ್ತದೆ. ಅವರ ಬಾಲ್ಯ, ವಿದ್ಯಾಭ್ಯಾಸ, ಕಾರ್ಯಪ್ರವೃತ್ತಿ, ಬೆಳೆದು ಬಂದ ರೀತಿ ಹಾಗೂ ಹಲವಾರು ಸಂಸ್ಥೆಗಳ ರೂವಾರಿಯಾಗಿದ್ದ ಪರಿ ಎಲ್ಲವನ್ನು ವಿವರಿಸುತ್ತದೆ,

ಬಾಲ ಬಾಲೆಯರ ಮೇಲೆ ಇವರ ಜೀವನ ಪ್ರಭಾವ ಬೀರಿದರೆ, ಈ ಪುಸ್ತಕದ ಗುರಿ ಸಾಧಿಸಿದಂತಾಗುತ್ತದೆ. ಇಂದಿನ ಮಕ್ಕಳು ಮುಂದೆ ಬಾಹ್ಯಾಕಾಶ ಕ್ಷೇತ್ರದಲ್ಲಿ ಸಂಶೋಧನೆಗಳನ್ನು ಕೈಗೊಂಡು, ಜನಸಾಮಾನ್ಯರ ಜೀವನವನ್ನು ಉತ್ತಮಗೊಳಿಸಲಿ ಎಂದು ಆಶಿಸುವೆ.

ಈ ಪುಸ್ತಕ ಬರೆಯಲು ಅವಕಾಶವಿತ್ತ ಯು. ಆರ್.ರಾವ್ ಉಪಗ್ರಹ ಕೇಂದ್ರದ ನಿರ್ದೇಶಕರಾದ ಶ್ರೀ ಎಂ. ಶಂಕರನ್

ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ಈ ಪುಸ್ತಕ ಸರಣಿಯ ಸಂಪಾದಕ ಮಂಡಲಿಯ ಅಧ್ಯಕ್ಷರಾದ ಶ್ರೀ ರಾಮನಗೌಡ ವಿ ನಾಡಗೌಡ ಹಾಗೂ ಸಂಸ್ಥೆಯ ಎಲ್ಲಾ ಹಿರಿಯರಿಗೆ ಹಾಗೂ ಸಹೋದ್ಯೋಗಿಗಳಿಗೂ ನಮನಗಳು.

**ಪ್ರಿಯಾಂಕ ವಿ**

# ಪರಿವಿಡಿ


| | |
|---|---|
| 1. ಪ್ರಸ್ತಾವನೆ | 01 |
| 2. ಬಾಲ್ಯ ಮತ್ತು ವಿದ್ಯಾಭ್ಯಾಸ | 02 |
| 3. ಗಮನಾರ್ಹ ಕೊಡುಗೆ ನೀಡಿದ ವಿವಿಧ ಕ್ಷೇತ್ರಗಳು | 14 |
| 4. ಬಾಹ್ಯಾಕಾಶ ರಂಗದಲ್ಲಿ ಸಾಧನೆ | 18 |
| 5. ಉಪಸಂಹಾರ | 29 |

## 1. ಪ್ರಸ್ತಾವನೆ

ವಿವಿಧ ಬಗೆಯ ಉಪಗ್ರಹಗಳು ಇಂದಿನ ನಮ್ಮ ಪ್ರತಿ ನಿತ್ಯದ ಜೀವನದಲ್ಲಿ ಹಾಸುಹೊಕ್ಕಾಗಿವೆ. ಈ ದಿನಗಳಲ್ಲಿ ಉಪಗ್ರಹಗಳ ಸಹಾಯವಿಲ್ಲದೇ ಜನಸಾಮಾನ್ಯರ ಜೀವನ ಮುಂದೆ ಸಾಗುವುದೇ ಇಲ್ಲ. ಉಪಗ್ರಹಗಳ ಉಪಯೋಗಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪ್ರತಿಯೊಬ್ಬ ಭಾರತೀಯ ಪ್ರಜೆಯೂ ಪಡೆಯುತ್ತಿದ್ದಾನೆ. ಜಗತ್ತಿನ ಕೆಲವೇ ಕೆಲವು ರಾಷ್ಟ್ರಗಳು ಬಾಹ್ಯಾಕಾಶ ಕ್ಷೇತ್ರದಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿಯಲ್ಲಿ ತೊಡಗಿಕೊಂಡಿವೆ. ಅದರಲ್ಲಿ ಭಾರತವೂ ಸಹ ಮುಂಚೂಣಿ ರಾಷ್ಟ್ರವಾಗಿದೆ ಎಂಬ ಹೆಮ್ಮೆ ಪ್ರತಿ ಭಾರತೀಯನಿಗೂ ಇದೆ.

ಇಂದಿನ ಈ ಸಂಭ್ರಮದ ಸ್ಥಿತಿಗೆ ಕಾರಣ ಯಾರು? ಭಾರತವು ಅಂತರಿಕ್ಷ ಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆಗಳನ್ನು ಮಾಡಲು ಸಾಧ್ಯವಾಗಿರುವುದಕ್ಕೆ ಕಾರಣಕರ್ತರು ಯಾರು? ಭಾರತದ ಅಂತರಿಕ್ಷ ಸಂಶೋಧನೆಗಳ ಮೂಲ ಪುರುಷ ಯಾರು?

ಈ ಎಲ್ಲದರ ಹಿಂದಿರುವ ಮಹಾನ್ ವ್ಯಕ್ತಿಯೇ ಡಾ. ವಿಕ್ರಂ ಅಂಬಾಲಾಲ್ ಸಾರಾಭಾಯಿ.

ಜಗತ್ತಿನಲ್ಲಿ ಪ್ರತಿ ವ್ಯಕ್ತಿಯೂ ತಮ್ಮ ಜೀವನದ ನಾಯಕರು ತಾವೇ ಆಗಿದ್ದರೂ, ಕೆಲವೇ ಕೆಲವು ಸಾಧಕರು ಮಾತ್ರ ಇಡೀ ಮನುಕುಲಕ್ಕೇ ನಾಯಕರಾಗಿರುತ್ತಾರೆ. ಅಂತಹವರಲ್ಲಿ ಒಬ್ಬರು ಡಾ. ವಿಕ್ರಂ ಅಂಬಾಲಾಲ್ ಸಾರಾಭಾಯಿ. ಡಾ. ಸಾರಾಭಾಯಿ ಅವರು ಒಬ್ಬ ವ್ಯಕ್ತಿ ಆಗಿರಲಿಲ್ಲ, ಒಂದು ಶಕ್ತಿ ಆಗಿದ್ದರು ಎಂದು ಹೇಳಬಹುದು. ಸಾಮಾನ್ಯ ಮನುಷ್ಯರಿಗಿಂತ ಅವರ ಕ್ಷಮತೆ, ಜಾಣ್ಮೆ, ಸಾಮರ್ಥ್ಯ ಬಹಳ ಪಟ್ಟು ಹೆಚ್ಚಾಗಿತ್ತು ಎನ್ನುವುದನ್ನು ಅವರ ಸಾಧನೆಗಳು ತೋರುತ್ತವೆ.

## 2. ಬಾಲ್ಯ ಮತ್ತು ವಿದ್ಯಾಭ್ಯಾಸ

ಡಾ. ವಿಕ್ರಂ ಅಂಬಾಲಾಲ್ ಸಾರಾಭಾಯಿ ಹುಟ್ಟಿದ್ದು 20 ಆಗಸ್ಟ್ 1919ರಂದು. ಅಹಮದಾಬಾದಿನ ಆಗರ್ಭ ಶ್ರೀಮಂತರೂ, ವ್ಯಾಪಾರಸ್ತರೂ ಆದ ಶ್ರೀ ಅಂಬಾಲಾಲ್ ಸಾರಾಭಾಯಿ ಹಾಗೂ ಶ್ರೀಮತಿ ಸರಳಾದೇವಿ ದಂಪತಿಗಳ ಮಗ ಡಾ. ವಿಕ್ರಂ ಅಂಬಾಲಾಲ್ ಸಾರಾಭಾಯಿ. ಅಂಬಾಲಾಲ್ ದಂಪತಿಗಳ ಒಟ್ಟು ಎಂಟು ಮಕ್ಕಳಲ್ಲಿ ಒಬ್ಬರಾದ ವಿಕ್ರಂ ಸಾರಾಭಾಯಿ ಬಾಲ್ಯದಿಂದಲೇ ತಮ್ಮ ಸಾಮರ್ಥ್ಯವನ್ನು ತೋರಲಾರಂಭಿಸಿದರು.

"ದ ಟ್ರೀಟ್" ಎಂಬ ಐವತ್ತಕ್ಕೂ ಹೆಚ್ಚು ಕೊಠಡಿಗಳಿದ್ದ ಅರಮನೆಯಂತಹ ಮನೆಯಲ್ಲಿ ಬೆಳೆಯಲಾರಂಭಿಸಿದ ವಿಕ್ರ್‍ಂ ಸಾರಾಭಾಯಿ, ತನ್ನ ಬಾಲ್ಯವನ್ನು ಕೇವಲ ಶ್ರೀಮಂತಿಕೆಯ ಸುಪ್ಪತ್ತಿಗೆ, ಸುಖದಲ್ಲಿ ಕಳೆಯಲು ಇಚ್ಛಿಸಲಿಲ್ಲ. ಶ್ರೀ ಅಂಬಾಲಾಲ್ ಅವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿಶೇಷ ಕಾಳಜಿ ವಹಿಸಿದರು. ಭಾರತದಲ್ಲೇ ಮೊಟ್ಟಮೊದಲ ಬಾರಿಗೆ ಮಾಂಟಸರಿ ಶಿಕ್ಷಣ ಪದ್ಧತಿಯ ಪ್ರಕಾರ ತಮ್ಮ ಮಕ್ಕಳಿಗೆ ವಿಭಿನ್ನವಾಗಿ, ವಿಶಿಷ್ಟವಾಗಿ ಶಿಕ್ಷಣವನ್ನು ನೀಡಲು ಪ್ರಾರಂಭಿಸಿದರು. ಈಗಿನ ಕಾಲದ ನಗರ ಪ್ರದೇಶಗಳಲ್ಲಿರುವ ಮಾಂಟಸರಿ ಶಾಲೆಗಳ ಮೂಲರೂಪದ ಶಿಕ್ಷಣವನ್ನೇ ಶ್ರೀ ಅಂಬಾಲಾಲರು ತಮ್ಮ ಮಕ್ಕಳಿಗೆ ನೀಡುವ ಯೋಜನೆ ಹಾಕಿಕೊಂಡರು. ಇಂತಹ ವಿಭಿನ್ನ ಶಿಕ್ಷಣದೊಡನೆ, ತಮ್ಮ ಅಸಾಮಾನ್ಯ ಬುದ್ಧಿವಂತಿಕೆ ಹಾಗೂ ಕಲಿಕೆಯ ಸಾಮರ್ಥ್ಯಗಳಿಂದ ವಿಕ್ರಂ ಸಾರಾಭಾಯಿ ವಿಶಿಷ್ಟ, ಬಾಲಕನಾಗಿ ರೂಪುಗೊಳ್ಳತೊಡಗಿದರು.

ವಿಕ್ರಂ ಸಾರಾಭಾಯಿಯವರಿಗೆ ಆರು ವರ್ಷವಾಗಿದ್ದಾಗಲೇ ತಮ್ಮ ತಂದೆ ತಂದುಕೊಟ್ಟ ರೈಲ್ವೆ ಇಂಜಿನ್, ಬೋಗಿ, ಸಿಗ್ನಲ್, ಸ್ಟೇಷನ್‌ಗಳ ಆಟಿಕೆಗಳ ಬಿಡಿಭಾಗಗಳನ್ನು ಬೇರ್ಪಡಿಸಿ ಅವುಗಳನ್ನು ಸೂಕ್ಷ್ಮವಾಗಿ

ಅವಲೋಕಿಸಿ ಮತ್ತೆ ಸಂಯೋಜಿಸುತ್ತಿದ್ದರು. ಅಷ್ಟೇ ಅಲ್ಲದೇ ಬೈಸಿಕಲ್ ತುಳಿಯುವುದು, ತಮ್ಮ ತೋಟದಲ್ಲಿನ ಕೊಳದಲ್ಲಿ ದೋಣಿ ಚಲಾಯಿಸುವುದು, ಮೊದಲಾದ ಚಟುವಟಿಕೆಗಳಲ್ಲಿ ಬಹಳ ಮುಂದಿದ್ದರು.

ಬಾಲ್ಯದಲ್ಲೇ ಅವರಿಗಿದ್ದ ಅಪ್ರತಿಮ ನೆನಪಿನ ಶಕ್ತಿ, ಚುರುಕು ಬುದ್ಧಿ, ಹಲವಾರು ವಿಷಯಗಳನ್ನು ಏಕಕಾಲದಲ್ಲಿ ಗ್ರಹಿಸುವ ಸಾಮರ್ಥ್ಯ, ಏಕಾಗ್ರತೆಗಳನ್ನು ಕಂಡ ಅವರ ಪಾಲಕರು ಹಾಗೂ ಗುರುಗಳು ಭವಿಷ್ಯದಲ್ಲಿ ವಿಕ್ರಂ ಸಾರಾಭಾಯಿ ಬಹುದೊಡ್ಡ ಸಾಧನೆಯನ್ನೇ ಮಾಡಬಹುದೆಂದು ಕನಸು ಕಂಡಿದ್ದರು. 1920ರಲ್ಲಿ ಅವರ ಮನೆಗೆ ಭೇಟಿ ನೀಡಿದ ರವೀಂದ್ರನಾಥ್ ಟಾಗೊರ್ ವಿಕ್ರಂ ಸಾರಾಭಾಯಿ ಅವರ ನಡವಳಿಕೆ ಮತ್ತು ಪ್ರತಿಭೆಯಿಂದ ಕೂಡಿದ ವಿಶಾಲ ಹಣೆಯ ಮುಖವನ್ನು ಕಂಡು ತಾಯಿ ಸರಳಾದೇವಿಯವರಿಗೆ ಮುಂದಿನ ದಿನಗಳಲ್ಲಿ ವಿಕ್ರಂ ಸಾರಾಭಾಯಿ ಬಹಳ ದೊಡ್ಡ ಸಾಧನೆಯನ್ನೇ ಮಾಡಲಿದ್ದಾನೆಂದು ಭವಿಷ್ಯ ನುಡಿದಿದ್ದರಂತೆ.

ಮನೆಯಲ್ಲಿಯೇ ಪಡೆದ ಮಾಂಟೆಸರಿ ಶಿಕ್ಷಣದ ಕೊನೆಯಲ್ಲಿ ಅಹಮದಾಬಾದಿನ ಆರ್ ಸಿ ಪ್ರೌಢಶಾಲೆಯಲ್ಲಿ ಹೊರ ಅಭ್ಯರ್ಥಿಯಾಗಿ ಮೆಟ್ರಿಕ್ಯುಲೇಷನ್ (ಹತ್ತನೆಯ

ತರಗತಿ) ಪರೀಕ್ಷೆ ತೆಗೆದುಕೊಂಡರು. ಬಾಲ್ಯದಲ್ಲಿ ಅವರು ಹಲವಾರು ಭಾಷೆಗಳು, ಗಣಿತ, ಕಲಾ ವಿಷಯಗಳನ್ನು ಅಭ್ಯಾಸ ಮಾಡಿದರೂ ಅವರ ಮೆಚ್ಚಿನ ವಿಷಯ ಮೂಲಭೂತ ವಿಜ್ಞಾನ ಆಗಿತ್ತು.

ಮೆಟ್ರಿಕ್ಯುಲೇಷನ್ ನಂತರ ವಿಕ್ರಂ ಸಾರಾಭಾಯಿ ಅವರು ಬಾಂಬೆ ವಿಶ್ವವಿದ್ಯಾಲಯದಡಿ ಬರುವ ಗುಜರಾತ್ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ (ಹನ್ನೆರಡನೆಯ ತರಗತಿ) ಪರೀಕ್ಷೆ ತೆಗೆದುಕೊಂಡರು.

ಆ ಪರೀಕ್ಷೆಯಲ್ಲಿ ಭೌತಶಾಸ್ತ್ರ ಹಾಗೂ ರಸಾಯನಶಾಸ್ತ್ರ ವಿಷಯಗಳಲ್ಲಿ ಅತ್ಯುತ್ತಮ ಅಂಕ ಗಳಿಸಿದರು. ನಂತರ ತಮ್ಮ ಉನ್ನತ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಕ್ಕೆ ದಾಖಲಾದರು. ಸಾರಾಭಾಯಿಯವರು ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಸೇರಿದ ಕೆಲವೇ ದಿನಗಳಲ್ಲಿ ಕ್ಯಾವೆಂಡಿಶ್ ಪ್ರಯೋಗಶಾಲೆಯ ನಿರ್ದೇಶಕರಾಗಿದ್ದ ನೊಬೆಲ್ ಪ್ರಶಸ್ತಿ ವಿಜೇತರೂ, ಪರಮಾಣು ಭೌತಶಾಸ್ತ್ರ(ನ್ಯೂಕ್ಲಿಯರ್ ಫಿಸಿಕ್ಸ್)ನ ಪಿತಾಮಹ ಎಂದೇ ಖ್ಯಾತರಾಗಿದ್ದ ನ್ಯೂಜಿಲ್ಯಾಂಡ್ ಮೂಲದ ಎರ್ನೆಸ್ಟ್ ರೂದರ್–ಫೋರ್ಡ್ ವಿಧಿವಶರಾದರು. ಜೊತೆಗೆ ಎರಡನೆಯ ಮಹಾಯುದ್ಧದ ಕರಾಳ ಛಾಯೆಯ

ಕಾರಣದಿಂದ ಯುರೋಪಿನಲ್ಲಿದ್ದ ಯಹೂದಿ ವಿಜ್ಞಾನಿಗಳು ಅಮೇರಿಕಾದತ್ತ ಮುಖ ಮಾಡಿದರು. 1940ರಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಿಂದ ನ್ಯಾಚುರಲ್ ಸೈನ್ಸಸ್ ನಲ್ಲಿ ಟ್ರೈಪೋಸ್(ಕೇಂಬ್ರಿಡ್ಜ್ ನೀಡುವ ಡಿಗ್ರಿ ಪದವಿ) ಪಡೆದ ಸಾರಭಾಯಿಯವರು, ಎರಡನೆಯ ಮಹಾಯುದ್ಧದ ಪರಿಣಾಮವಾಗಿ ಭಾರತಕ್ಕೆ ವಾಪಸಾಗಬೇಕಾಯಿತು.

ಸಾರಾಭಾಯಿಯವರು ತಮ್ಮ ಸಂಶೋಧನೆಯನ್ನು ಇಂಗ್ಲೆಂಡಿನಲ್ಲೇ ಮುಂದುವರೆಸದೆ ಇದ್ದದ್ದು, ಭಾರತದ ಅದೃಷ್ಟವೆಂದೇ ಹೇಳಬಹುದು. ಸಾರಾಭಾಯಿಯವರು ಕೇಂಬ್ರಿಡ್ಜಿನಲ್ಲಿ ಪದವಿ ಪಡೆದು, ತಮ್ಮ ಸ್ನಾತಕೋತ್ತರ ಪದವಿ ಹಾಗೂ ಸಂಶೋಧನಾ ಅಧ್ಯಯನಕ್ಕಾಗಿ ನೊಬೆಲ್ ಪ್ರಶಸ್ತಿ ಪುರಸ್ಕೃತ ಸರ್ ಸಿ.ವಿ.ರಾಮನ್ ಅವರ ಮಾರ್ಗದರ್ಶನದಲ್ಲಿ ಭಾರತದಲ್ಲೇ ಶ್ರೇಷ್ಠ ವೈಜ್ಞಾನಿಕ ಸಂಸ್ಥೆಯಾದ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್(ಐ.ಐ.ಎಸ್.ಸಿ)ನಲ್ಲಿ ದಾಖಲಾದರು. ಸರ್ ಸಿ.ವಿ.ರಾಮನ್ ಅವರ ಮಾರ್ಗದರ್ಶನದಲ್ಲಿ ಸಾರಾಭಾಯಿಯವರು 1940ರಿಂದ 1945ರವರೆಗೆ, ಬಾಹ್ಯಾಕಾಶದಿಂದ ಬಂದೆರಗುವ ಕಾಸ್ಮಿಕ್ ಕಿರಣಗಳ ಬಗ್ಗೆ ತಮ್ಮ ಸಂಶೋಧನಾ ಅಧ್ಯಯನ ಪ್ರಾರಂಭಿಸಿದ್ದು, ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ಮುಂದೆ

ಸಾಧಿಸಬಹುದಾದ ಮಹಾನ್ ಸಾಧನೆಗಳಿಗೆ ಕಾರಣವಾಯಿತೆಂದೇ ಹೇಳಬಹುದು.

ಸಾರಾಭಾಯಿಯವರಿಗಿಂತ 10 ವರ್ಷಗಳ ಮೊದಲೇ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಿಂದ ಪದವಿ ಪಡೆದ, ಭಾರತದ ಅಣುಶಕ್ತಿ ಕಾರ್ಯಕ್ರಮದ ಪಿತಾಮಹರೆಂದೇ ಖ್ಯಾತರಾದ ಹೋಮಿ ಜಹಾಂಗಿರ್ ಬಾಬಾ ಆಗ ಐ.ಐ.ಎಸ್.ಸಿ.ಯಲ್ಲಿ ರೀಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಹೋಮಿ ಬಾಬ ಅವರನ್ನು ಭೇಟಿಯಾದ ಸಾರಾಭಾಯಿ ಅವರ ಜೀವನ ಒಂದು ಹೊಸ ತಿರುವನ್ನೇ ಪಡೆದು ಸಾರಾಭಾಯಿಯವರು ಮುಂದೆ ಭಾರತೀಯ ಅಣುಶಕ್ತಿ ಕಾರ್ಯಕ್ರಮದಲ್ಲಿ ನಾಯಕತ್ವ ವಹಿಸಿಕೊಳ್ಳಲು ಕಾರಣವಾಯಿತು.

ಐ.ಐ.ಎಸ್.ಸಿನಲ್ಲಿ ಸಂಶೋಧನೆ ನಡೆಸುತ್ತಿದ್ದಾಗ ಸಾರಾಭಾಯಿಯವರು ಅಲ್ಲಿನ ಹಾಸ್ಟೆಲಿನಲ್ಲಿ ವಾಸಿಸದೆ ಸಮೀಪದ ಮಲ್ಲೇಶ್ವರಂನಲ್ಲಿನ ಪ್ರೇಮಾಲಯ ಎಂಬ ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಮನೆಯ ಹೆಸರಿನ ಪ್ರಭಾವದಿಂದಲೋ ಏನೋ ಅವರಿಗೆ ಕಲೆ, ಸಂಗೀತ, ನೃತ್ಯಗಳಲ್ಲಿ ಆಸಕ್ತಿಯುಂಟಾಗಿ ಅಂತಿಮವಾಗಿ ಆಗಿನ ಖ್ಯಾತ ಭರತನಾಟ್ಯ ನೃತ್ಯಗಾರ್ತಿ ಮೃಣಾಲಿನಿ

ಸ್ವಾಮಿನಾಥನ್ ಅವರಲ್ಲಿ ಪ್ರೇಮವುಂಟಾಗಿ ಅವರಿಬ್ಬರೂ 1942ರ ಆಗಸ್ಟ್ ತಿಂಗಳಲ್ಲಿ ವಿವಾಹವಾದರು.

1943ರಲ್ಲಿ ಸಾರಾಭಾಯಿಯವರು ಎತ್ತರದ ಭೂಪ್ರದೇಶದಲ್ಲಿ ಕಾಸ್ಮಿಕ್ ಕಿರಣಗಳನ್ನು ಮಾಪನ ಮಾಡಲು ಕಾಶ್ಮೀರಕ್ಕೆ ತೆರಳಿದರು. ಹೋಮಿ ಬಾಬಾ ಅವರ ಸೂಚನೆಯಂತೆ ಗೀಗರ್ ಕೌಂಟರ್ ಉಪಯೋಗಿಸಿ ನಿಧಾನಗತಿಯ ಮೀಸನ್ಸ್‌ಗಳನ್ನು ನೇರವಾಗಿ ಮಾಪನ ಮಾಡುವ ಪದ್ಧತಿ ಕಂಡುಹಿಡಿದರು. ಹೊರಗಿನಿಂದ ಬರುವ ಕಾಸ್ಮಿಕ್ ಕಿರಣಗಳು ಭೂಮಿಯ ಮೇಲಿನ ಭಾಗದ ವಾತಾವರಣದಲ್ಲಿನ ಪರಮಾಣುಗಳೊಡನೆ ಘರ್ಷಿಸಿದಾಗ ರೂಪುಗೊಳ್ಳುವ ಕಣಗಳೇ ಮೀಸನ್ಸ್‌ಗಳು. ಈ ಮಾಪನಗಳನ್ನು ಅಧ್ಯಯನ ಮಾಡಿದಾಗ ಕಾಸ್ಮಿಕ್ ಕಿರಣಗಳ ತೀಕ್ಷ್ಣತೆ ದಿನದಲ್ಲಿ ಸಮಯಕ್ಕೆ ತಕ್ಕಂತೆ ಬದಲಾಗುತ್ತಲೇ ಇತ್ತು. ಈ ಸತ್ಯ ಕಂಡುಕೊಂಡ ಸಾರಾಭಾಯಿಯವರು ತಮ್ಮ ಸಂಶೋಧನಾ ವಿಷಯವನ್ನು "ಕಾಸ್ಮಿಕ್ ರೆ ಇನ್ವೆಸ್ಟಿಗೇಷನ್ ಇನ್ ಟ್ರಾಪಿಕಲ್ ಲ್ಯಾಟಿಟ್ಯೂಡ್ಸ್" ನಿಂದ "ಟೈಮ್ ವೇರಿಯೇಷನ್ಸ್ ಆಫ್ ಕಾಸ್ಮಿಕ್ ರೇಸ್" ಎಂಬ ವಿಷಯಕ್ಕೆ ಬದಲಾಯಿಸಿಕೊಂಡರು.

1945ರಲ್ಲಿ ಎರಡನೆಯ ಮಹಾಯುದ್ಧ ಮುಗಿದ ಮೇಲೆ ತಮ್ಮ ಪಿ.ಹೆಚ್.ಡಿ ಅಧ್ಯಯನವನ್ನು ಪೂರ್ಣಗೊಳಿಸಲು ಸಾರಾಭಾಯಿಯವರು ತಮ್ಮ ಪತ್ನಿಯೊಡನೆ ಕೇಂಬ್ರಿಡ್ಜಿಗೆ ಹೊರಟರು. ಮಾಂಚೆಸ್ಟರಿನಲ್ಲಿ ನಡೆದ ಅವರ ಅಂತಿಮ ಮೌಖಿಕ ಪರೀಕ್ಷೆಯನ್ನು ನೊಬೆಲ್ ಪ್ರಶಸ್ತಿ ವಿಜೇತರಾದ ಪರಮಾಣು ಭೌತಶಾಸ್ತ್ರ ಹಾಗೂ ಕಾಸ್ಮಿಕ್ ವಿಕಿರಣಗಳ ತಜ್ಞ ಬ್ಲಾಕೆಟ್ ಅವರು ನಡೆಸಿದರು, ನಂತರ ವಿಕ್ರಂ ಸಾರಾಭಾಯಿಯವರಿಗೆ 1947ರಲ್ಲಿ ಪಿ.ಹೆಚ್.ಡಿ ಪದವಿ ನೀಡಲಾಯಿತು.

ಪಿ.ಹೆಚ್.ಡಿ ಪದವಿ ಪಡೆದ ನಂತರ ಭಾರತಕ್ಕೆ ವಾಪಸಾದ ವಿಕ್ರಂ ಸಾರಾಭಾಯಿಯವರು ಫಿಸಿಕಲ್ ರಿಸರ್ಚ್ ಲ್ಯಾಬೊರೇಟರಿಯನ್ನು ಸ್ಥಾಪಿಸಿದರು. ಈ ಸಂಸ್ಥೆಯಲ್ಲಿ ವಿಕ್ರಂ ಸಾರಾಭಾಯಿಯವರು ತಮ್ಮ ಪಿ.ಹೆಚ್.ಡಿ ನಂತರದ ಸಂಶೋಧನೆಯನ್ನು ಮುಂದುವರೆಸಿದರು. ಆರಂಭದಲ್ಲಿ ತಮ್ಮ ನೆಚ್ಚಿನ ವಿಷಯವಾದ ಕಾಸ್ಮಿಕ್ ಕಿರಣಗಳು, ವಾತಾವರಣದ ಮೇಲ್ಪದರಗಳ ಬಗ್ಗೆ ಸಂಶೋಧನೆಗಾಗಿ ಪ್ರಾರಂಭವಾದ ಈ ಸಂಸ್ಥೆಯಲ್ಲಿ ದಿನಕಳೆದಂತೆ ಭೌತಶಾಸ್ತ್ರ, ಭೂಮಿಯ ವಾತಾವರಣ, ಬಾಹ್ಯಾಕಾಶ ವಿಜ್ಞಾನ, ಖಗೋಳ ಶಾಸ್ತ್ರ,



ಚಿತ್ರ–1 ಡಾ. ವಿಕ್ರಂ ಸಾರಾಭಾಯಿ




ಚಿತ್ರ–2 ಡಾ. ವಿಕ್ರಂ ಸಾರಾಭಾಯಿ ಮತ್ತು ಮೃಣಾಲಿನಿ



ಚಿತ್ರ–3 ಬಾಲ್ಯದಲ್ಲಿ ತಂದೆ ತಾಯಿ ಜೊತೆ ಸಾರಾಭಾಯಿ



ಚಿತ್ರ–4 ತಮ್ಮ ಮಕ್ಕಳೊಂದಿಗೆ ಸಾರಾಭಾಯಿ




ಚಿತ್ರ–5 ಇಸ್ರೊ ವಿಜ್ಞಾನಿಗಳೊಂದಿಗೆ



ಚಿತ್ರ–6 ವಿದೇಶದಲ್ಲಿ ಸಾರಾಭಾಯಿ

ಸೂರ್ಯ ಹಾಗೂ ಇನ್ನಿತರ ಗ್ರಹಗಳ ಬಗ್ಗೆ ಸಂಶೋಧನೆಗಳನ್ನು ಕೈಗೆತ್ತಿಕೊಂಡಿದ್ದು ಸಾರಾಭಾಯಿಯವರ ದೂರದೃಷ್ಟಿಯ ಫಲವೆಂದೇ ಹೇಳಬಹುದು. ಈ ಸಂಸ್ಥೆಯು ಪ್ರಾರಂಭದ ದಿನಗಳಲ್ಲಿ ವಿಕ್ರಂ ಸಾರಾಭಾಯಿಯವರ ಮನೆ "ದ ರಿಟ್ರೀಟ್" ನಲ್ಲಿ ಕಾರ್ಯನಿರ್ವಹಿಸಿದ್ದು, ಸಾರಾಭಾಯಿ ಕುಟುಂಬದವರು ಭಾರತದ ವೈಜ್ಞಾನಿಕ ಕ್ಷೇತ್ರಕ್ಕೆ ನೀಡಿದ ಮಹತ್ವಪೂರ್ಣ ಕೊಡುಗೆಯನ್ನು ತೋರಿಸುತ್ತದೆ.

ಈ ನಡುವೆಯೇ ಸಾರಾಭಾಯಿ ದಂಪತಿಗಳಿಗೆ 1947ರಲ್ಲಿ ಜನಿಸಿದ ಕಾರ್ತಿಕೇಯ ಸಾರಾಭಾಯಿ ತಮ್ಮ ತಂದೆಯ ಹಾಗೆ ವೈಜ್ಞಾನಿಕ ಕ್ಷೇತ್ರದಲ್ಲೂ ಹಾಗೂ 1954ರಲ್ಲಿ ಜನಿಸಿದ ಮಲ್ಲಿಕಾ ಸಾರಾಭಾಯಿ ತಮ್ಮ ತಾಯಿಯ ಹಾಗೆ ನೃತ್ಯ ಕಲೆಯಲ್ಲೂ ಸಾಧನೆ ಮಾಡಿದರು. ಸಾರಾಭಾಯಿಯವರ ಕುಟುಂಬಕ್ಕೆ ಮಹಾತ್ಮ ಗಾಂಧೀಜಿಯವರು ಬಹಳ ಆತ್ಮೀಯರಾಗಿದ್ದರು. ವಿಕ್ರಂ ಸಾರಾಭಾಯಿಯವರು ಬಾಲಕನಾಗಿದ್ದಾಗ ಗಾಂಧೀಜಿಯವರು ಅವರ ಮನೆಗೆ ಆಗಾಗ್ಗೆ ಭೇಟಿ ನೀಡುತ್ತಿದ್ದರು. ಆ ಸಮಯದಲ್ಲಿ ಗಾಂಧೀಜಿಯವರ ಆದರ್ಶ, ತತ್ವ, ಸಿದ್ಧಾಂತಗಳು, ವಿಕ್ರಂ ಸಾರಾಭಾಯಿಯವರ

ಮೇಲೆ ಬಹಳ ಪ್ರಭಾವ ಬೀರಿತ್ತು. ತಮ್ಮ ಜೀವನ ಪೂರ್ತಿ ಅವರು ಗಾಂಧೀಜಿಯವರ ಸತ್ಯಸಿದ್ಧಾಂತವನ್ನು ಪಾಲಿಸಿಕೊಂಡು ಬಂದರು ಹಾಗೂ ಇತರರೂ ಸತ್ಯನಿಷ್ಠರಾಗಿರಬೇಕೆಂದೂ ಅಪೇಕ್ಷಿಸುತ್ತಿದ್ದರು. ನೇರ ನುಡಿ, ಸತ್ಯ ನಿಷ್ಠೆ, ವಿನಯವಂತಿಕೆ, ಮೃದುಮನಸು ಹೊಂದಿದ್ದ ವಿಕ್ರಂ ಸಾರಾಭಾಯಿಯವರ ವ್ಯಕ್ತಿತ್ವ ಇಡಿ ಭಾರತವೇ ಒಪ್ಪಿ, ಅಪ್ಪಿಕೊಳ್ಳುವಂತಿತ್ತು.

## 3. ಗಮನಾರ್ಹ ಕೊಡುಗೆ ನೀಡಿದ ವಿವಿಧ ಕ್ಷೇತ್ರಗಳು

ವಿಕ್ರಂ ಸಾರಾಭಾಯಿರವರು ಕೇವಲ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ತಮ್ಮನ್ನು ಸೀಮಿತಗೊಳಿಸಲಿಲ್ಲ. ಕಲಾ ಕ್ಷೇತ್ರದಿಂದ ಹಿಡಿದು ಬಾಹ್ಯಾಕಾಶ ಕ್ಷೇತ್ರದವರೆಗೂ ತಮ್ಮನ್ನೇ ತಾವು ತೊಡಗಿಸಿಕೊಂಡಿದ್ದರು. ಪ್ರತಿ ಕ್ಷೇತ್ರದಲ್ಲೂ ಹೊಸ ಪದ್ಧತಿಗಳು, ಹೊಸ ವ್ಯವಸ್ಥೆಗಳು, ಹೊಸ ಯೋಜನೆಗಳು, ಹೊಸ ಪ್ರಕ್ರಿಯೆಗಳು, ಮಾನವಸಂಪನ್ಮೂಲದ ಕ್ಷಮತೆ ಹೆಚ್ಚಿಸುವ ಹೊಸ ವಿಧಾನಗಳು, ಮುಂತಾದ ಕ್ಷೇತ್ರಗಳಲ್ಲಿ ಹೊಸ ಸಂಸ್ಥೆಗಳನ್ನು ಸ್ಥಾಪಿಸಿದರು. ಅಷ್ಟೇ ಅಲ್ಲದೇ ವಿವಿಧ ಕ್ಷೇತ್ರಗಳ ಸಂಸ್ಥೆಗಳ ಜಂಟಿ ಯೋಜನೆಗಳನ್ನು ಹಮ್ಮಿಕೊಂಡರು. ಉದಾಹರಣೆಗೆ ಕೃಷಿ ಹಾಗೂ

ಪರಮಾಣು ಸಂಸ್ಥೆಗಳ ಜಂಟಿ ಯೋಜನೆ, ಆಕಾಶವಾಣಿ ಹಾಗೂ ಬಾಹ್ಯಾಕಾಶ ಸಂಸ್ಥೆಗಳ ಜಂಟಿ ಯೋಜನೆ ಮೊದಲಾದ ಇನ್ನೂ ಹತ್ತು ಹಲವು ವಿವಿಧ ಕ್ಷೇತ್ರಗಳ ಸಂಸ್ಥೆಗಳು ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಿ ದೇಶದ ಜನಸಾಮಾನ್ಯನಿಗೆ ಹೊಸ ಕೊಡುಗೆ ನೀಡುವತ್ತ ಹಲವಾರು ಕಾರ್ಯಗಳನ್ನು ಕೈಗೆತ್ತಿಕೊಂಡರು.

ವಿಕ್ರಂ ಸಾರಾಭಾಯಿಯವರು ಅಣುಶಕ್ತಿ ಹಾಗೂ ಬಾಹ್ಯಾಕಾಶ ಕ್ಷೇತ್ರದಲ್ಲಿ ತಮ್ಮನ್ನು ತಾವೇ ಸಂಪೂರ್ಣ ತೊಡಗಿಸಿಕೊಳ್ಳುವುದರ ಮೊದಲು ಕೈಗೊಂಡ ವಿವಿಧ ಕ್ಷೇತ್ರಗಳ ಕಾರ್ಯಗಳ ಬಗ್ಗೆ ಒಮ್ಮೆ ಅವಲೋಕಿಸೋಣ. ಕಲೆ, ಸಂಗೀತ, ನೃತ್ಯಗಳಲ್ಲಿ ಅಪಾರ ಆಸಕ್ತಿಯಿದ್ದ ವಿಕ್ರಂ ಸಾರಾಭಾಯಿಯವರು ಖ್ಯಾತ ಭರತನಾಟ್ಯ ಹಾಗೂ ಹಲವು ಪ್ರಾಕಾರಗಳ ನೃತ್ಯ ಪ್ರವೀಣೆ, ತಮ್ಮ ಪತ್ನಿ ಮೃಣಾಲಿನಿ ಸಾರಾಭಾಯಿ ಅವರೊಡನೆ ಜಂಟಿಯಾಗಿ "ದರ್ಪಣ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್" ಎಂಬ ಕಲಾ ಸಂಸ್ಥೆಯನ್ನು ಅಹಮದಾಬಾದಿನಲ್ಲಿ 1949ರಲ್ಲಿ ಸ್ಥಾಪಿಸಿದರು. ಈ ಸಂಸ್ಥೆಯಲ್ಲಿ ಸಂಗೀತ, ನೃತ್ಯ, ನಾಟಕ ಮೊದಲಾದ ವಿವಿಧ ಕಲೆಗಳ ಪ್ರಾಕಾರಗಳಲ್ಲಿ ಯುವಜನರಿಗೆ, ಆಸಕ್ತರಿಗೆ ತರಬೇತಿ ನೀಡಲಾಯಿತು.

ಹಲವಾರು ಖ್ಯಾತನಾಮರು ಈ ಸಂಸ್ಥೆಯಲ್ಲಿ ತರಬೇತಿ ಪಡೆದುಕೊಂಡವರಾಗಿದ್ದಾರೆ.

1950ರಲ್ಲಿ ಸಾರಾಭಾಯಿ ತಮ್ಮ ಕುಟುಂಬದ ಒಡೆತನದಲ್ಲಿದ್ದ ಬರೋಡಾದ ಕೆಮಿಕಲ್ಸ್ ಸಂಸ್ಥೆಯ ನಾಯಕತ್ವವನ್ನು ವಹಿಸಿಕೊಂಡರು. 1955ರಲ್ಲಿ ತಮ್ಮದೇ ಆದ ಸುಹೃದ್ ಗೀಗಿ ಲಿಮಿಟೆಡ್ ಸಂಸ್ಥೆಯನ್ನು ಸ್ಥಾಪಿಸಿದರು. 1956ರಲ್ಲಿ ಸಾರಾಭಾಯಿಯವರು ಯುರೋಪ್ ಹಾಗೂ ಅಮೇರಿಕಾ ರಾಷ್ಟ್ರಗಳ ಸಹಯೋಗದಿಂದ ಜನಸಾಮಾನ್ಯರಿಗೆ ಅತ್ಯಾವಶ್ಯಕವಾಗುವ ವಿಟಮಿನ್, ಪೆನ್ಸುಲಿನ್, ಸ್ಟ್ರೆಪ್ಟೊಮೈಸಿನ್ ಮೊದಲಾದ ಔಷಧಿಗಳ ತಯಾರಿಕೆಯನ್ನು ಪ್ರಾರಂಭಿಸಿದರು.

1957ರಲ್ಲಿ ಸ್ವಸ್ತಿಕ್ ಆಯಿಲ್ ಮಿಲ್ಸ್ ಲಿಮಿಟೆಡ್ನ ಆಡಳಿತವನ್ನು ವಹಿಸಿಕೊಂಡರು. ವಿಕ್ರಂ ಸಾರಾಭಾಯಿಯವರು ತಮ್ಮ ವೈಜ್ಞಾನಿಕ ದೃಷ್ಟಿಕೋನದಿಂದ ಆ ಕಾರ್ಖಾನೆಯಲ್ಲಿ ಬದಲಾವಣೆಗಳನ್ನು ತರಲಾರಂಭಿಸಿದರು. ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿ ದೇಶದಲ್ಲಿ ಜವಳಿ ಕ್ರಾಂತಿಗೆ ಮುನ್ನುಡಿ ಬರೆಯಲು ಅಹಮದಾಬಾದ್ ಜವಳಿ ಇಂಡಸ್ಟ್ರೀಸ್ ರಿಸರ್ಚ್ ಅಸೋಸಿಯೇಷನ್ ಸಂಸ್ಥೆಯನ್ನು 1957ರಲ್ಲಿ

ಪ್ರಾರಂಭಿಸಿದರು. 1958ರಲ್ಲಿ ಸಾರಾಭಾಯಿ ಮೆರ್ಕ್ ಲಿಮಿಟೆಡ್ ಸಂಸ್ಥೆಯನ್ನು ಹುಟ್ಟು ಹಾಕಿದರು. 1960–62ರ ಮಧ್ಯೆ ಕೊಲ್ಕೊತಾದ ಸ್ಟಾಂಡರ್ಡ್ ಫಾರ್ಮಸುಟಿಕಲ್ಸ್ ಸಂಸ್ಥೆಯನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡಿದ್ದಲ್ಲದೇ ಸಾರಾಭಾಯಿ ಸಂಶೋಧನಾ ಕೇಂದ್ರ ಹಾಗೂ ಆಪರೇಷನ್ಸ್ ರೀಸರ್ಚ್ ಗ್ರೂಪ್ ಸಂಸ್ಥೆಗಳನ್ನು ಸ್ಥಾಪಿಸಿದರು. ಜೊತೆಯಲ್ಲಿಯೇ ಮತ್ತೂ ಮೂರು ಹೊಸ ಕಂಪನಿಗಳನ್ನು ಸ್ಥಾಪಿಸಿದ ಸಾರಾಭಾಯಿಯವರು ದಿನಕ್ಕೆ 20 ಗಂಟೆ ಅವಿರತವಾಗಿ ದುಡಿಯುತ್ತಾ ಕೇವಲ 4 ಗಂಟೆ ನಿದ್ರೆ ಮಾಡುತ್ತಿದ್ದರು. ಅವರು ಹೊಸ ಹೊಸ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದೇ ಅಲ್ಲದೇ ಅಲ್ಲಿ ತಮ್ಮದೇ ಹೊಸ ವೈಜ್ಞಾನಿಕ ವಿಧಾನಗಳನ್ನು ಅಳವಡಿಸುತ್ತಾ ಎಲ್ಲಾ ಯೋಜನೆಗಳಲ್ಲೂ ಯಶಸ್ವಿಯಾಗುತ್ತಿದ್ದರು.

1955–62ರಲ್ಲಿ ಅಮೇರಿಕಾದ ಬೋಸ್ಟನ್ನಿನ ಎಮ್.ಐ.ಟಿ.ಯಲ್ಲಿ ವಿಸಿಟಿಂಗ್ ಪ್ರೊಫೆಸರ್ ಆಗಿ ವಿದ್ಯಾರ್ಥಿಗಳಿಗೆ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಭಾರತೀಯ ಕೈಗಾರಿಕಾ ಕ್ಷೇತ್ರದಲ್ಲಿದ್ದ ಆಡಳಿತ ವರ್ಗದವರಿಗಾಗಿ ವಿಶೇಷ ಶಿಕ್ಷಣದ ಅವಶ್ಯಕತೆ ಇದೆ ಎಂಬುದು ವಿಕ್ರಂ ಸಾರಾಭಾಯಿಯವರ

ಆಲೋಚನೆಯಾಗಿತ್ತು. ಈ ನಿಟ್ಟಿನಲ್ಲಿ ಅವರ ಅವಿರತ ಪ್ರಯತ್ನದಿಂದ ಭಾರತ ಸರ್ಕಾರ, ಗುಜರಾತ್ ಸರ್ಕಾರ, ಗುಜರಾತಿನ ಉದ್ದಿಮೆಗಳ ಮುಖ್ಯಸ್ಥರ ಸಹಕಾರದಿಂದ ಅಹಮದಾಬಾದಿನ ಖ್ಯಾತ ಉದ್ಯಮಿ ಕಸ್ತೂರ್‌ಭಾಯ್ ಲಾಲ್‌ಭಾಯ್ ಅವರ ಜೊತೆಗೂಡಿ ಇಂದು ವಿಶ್ವ ವಿಖ್ಯಾತವಾಗಿರುವ ಭಾರತದಲ್ಲೇ ಅತ್ಯುತ್ತಮ ಮ್ಯಾನೆಜ್ಮೆಂಟ್ ಶಿಕ್ಷಣ ಸಂಸ್ಥೆಯಾಗಿ ರೂಪುಗೊಂಡಿರುವ ಅಹಮದಾಬಾದಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೆಜ್ಮೆಂಟ್ ಸಂಸ್ಥೆಯನ್ನು 1961ರಲ್ಲಿ ಸ್ಥಾಪಿಸಿ ಆರಂಭದ ಮೂರು ವರ್ಷ ಅದರ ಸಂಸ್ಥಾಪಕ ನಿರ್ದೇಶಕರಾದರು.

## 4. ಬಾಹ್ಯಾಕಾಶ ರಂಗದಲ್ಲಿ ಸಾಧನೆ

ವಿಕ್ರಂ ಸಾರಾಭಾಯಿಯವರು ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು, ತಮ್ಮ ದೂರದೃಷ್ಟಿ, ವೈಜ್ಞಾನಿಕ ವಿಧಾನ ಹಾಗೂ ತಂತ್ರಜ್ಞಾನಗಳ ಅಳವಡಿಕೆಗಳಿಂದ ಭಾರತದ ಔದ್ಯಮಿಕ ರಂಗವು ಆಧುನಿಕಗೊಳ್ಳಲು ಕಾರಣರಾದರು. ನಂತರ ಅವರು ತಮ್ಮ ನೆಚ್ಚಿನ ಸಂಶೋಧನಾ ವಿಷಯವಾದ ಬಾಹ್ಯಾಕಾಶ ಕ್ಷೇತ್ರದತ್ತ ಕಾಲಿಟ್ಟರು. ಆ ಒಂದು ಹೆಜ್ಜೆ ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ಇಟ್ಟಿರುವ ಒಂದು

ಅಮೋಘ ಹೆಜ್ಜೆಗೆ ಮೂಲಕಾರಣವಾಯಿತೆಂದೇ ಹೇಳಬಹುದು. 1957ರ ಅಕ್ಟೋಬರ್ 4ರಂದು ಅಂದಿನ ಸೋವಿಯಟ್ ರಷ್ಯಾ ಜಗತ್ತಿನಲ್ಲೇ ಮೊಟ್ಟ ಮೊದಲ ಬಾರಿಗೆ ಉಪಗ್ರಹವೊಂದನ್ನು ಅಂತರಿಕ್ಷಕ್ಕೆ ಹಾರಿಸಿತು.

ಸ್ಪುಟ್ನಿಕ್ ಉಡಾವಣೆಯ ನಂತರ 1958ರಲ್ಲಿ ಅಂತರರಾಷ್ಟ್ರೀಯ ವಿಜ್ಞಾನ ಸಂಸ್ಥೆಯು ಬಾಹ್ಯಾಕಾಶ ಸಂಶೋಧನೆಗಾಗಿಯೇ ಹೊಸ ಸಂಸ್ಥೆಯಾದ ಕಮಿಟಿ ಆನ್ ಸ್ಪೇಸ್ ರಿಸರ್ಚ್(ಕಾಸ್ಪಾರ್) ಎಂಬ ಸಂಸ್ಥೆಯನ್ನು ಸ್ಥಾಪಿಸಿತು. 1962ರಲ್ಲಿ ಈ ಸಂಸ್ಥೆಯು ಭೂಮಿಯ ಮ್ಯಾಗ್ನೆಟಿಕ್ ಇಕ್ವೇಟರ್‍–ನಲ್ಲಿ ಉಪಗ್ರಹಗಳನ್ನು ಉಡಾವಣೆ ಮಾಡುವುದು ಅತ್ಯುತ್ತಮವೆಂದು ಅಭಿಪ್ರಾಯಪಟ್ಟಿತು. ಇದೇ ಸತ್ಯವನ್ನು ವಿಕ್ರಂ ಸಾರಾಭಾಯಿಯವರು 1947ರಲ್ಲೇ ತಮ್ಮ ಪಿ.ಹೆಚ್.ಡಿ ಪ್ರಬಂಧದಲ್ಲಿ ದಾಖಲಿಸಿದ್ದರು. ಇದು ಸಾರಾಭಾಯಿಯವರಿಗೆ ಬಾಹ್ಯಾಕಾಶ ವಿಜ್ಞಾನ, ಉಪಗ್ರಹಗಳ ಉಡಾವಣೆ, ರಾಕೆಟ್ ತಂತ್ರಜ್ಞಾನದ ಬಗ್ಗೆ ಇದ್ದ ಅದ್ವಿತೀಯ ಜ್ಞಾನಕ್ಕೆ ಉದಾಹರಣೆಯಾಗಿದೆ.

ಬಾಹ್ಯಾಕಾಶ ಕ್ಷೇತ್ರದ ಪ್ರಾಮುಖ್ಯತೆಯನ್ನು ಮನಗೊಂಡ ಭಾರತ ಸರ್ಕಾರವು 1961ರ ಆಗಸ್ಟ್ ತಿಂಗಳಿನಲ್ಲಿ ಬಾಹ್ಯಾಕಾಶ ಸಂಶೋಧನಾ ಕಾರ್ಯವನ್ನು

ಕೈಗೊಳ್ಳಲು ಹೋಮಿ ಜಹಾಂಗಿರ್ ಬಾಬಾ ಅವರು ಕಾರ್ಯದರ್ಶಿಯಾಗಿದ್ದ ಅಣುಶಕ್ತಿ ಇಲಾಖೆಗೆ ಸೂಚಿಸಿತು. ಹೀಗೆ ಭಾರತದಲ್ಲಿ ಬಾಹ್ಯಾಕಾಶ ಸಂಶೋಧನಾ ಕಾರ್ಯವು ಅಣುಶಕ್ತಿ ಇಲಾಖೆಯ ಅಧೀನದಲ್ಲಿ ಪ್ರಾರಂಭವಾಯಿತು. ಹೋಮಿ ಬಾಬ ಅವರು 1962ರ ಫೆಬ್ರವರಿ 16ರಂದು ಅಂತರರಾಷ್ಟ್ರೀಯ ಸಂಸ್ಥೆಯಾದ ಕಾಸ್ಪಾರ್ ತರಹವೇ ಬಾಹ್ಯಾಕಾಶ ಸಂಶೋಧನಾ ಕಾರ್ಯಗಳನ್ನು ನಡೆಸಲು ಅಣುಶಕ್ತಿ ಇಲಾಖೆಯ ಅಧೀನದಲ್ಲಿಯೇ ಪ್ರತ್ಯೇಕ ವಿಭಾಗವಾಗಿ ಇಂಡಿಯನ್ ನ್ಯಾಷನಲ್ ಕಮಿಟಿ ಆನ್ ಸ್ಪೇಸ್ ರಿಸರ್ಚ್ (INCOSPAR)ನ್ನು ಸ್ಥಾಪಿಸಿ ಅದಕ್ಕೆ ಡಾ. ವಿಕ್ರಂ ಸಾರಾಭಾಯಿಯವರನ್ನು ಮುಖ್ಯಸ್ಥರನ್ನಾಗಿ ಮಾಡಿದರು. ಭಾರತದಲ್ಲೂ ಬಾಹ್ಯಾಕಾಶ ವಿಜ್ಞಾನಿಗಳನ್ನು ತಯಾರು ಮಾಡುವ ನಿಟ್ಟಿನಲ್ಲಿ ಆಯ್ದ ಹಲವು ಯುವ ಇಂಜಿನಿಯರ್‌ಗಳನ್ನು ಅಮೇರಿಕಾದ ಬಾಹ್ಯಾಕಾಶ ಸಂಸ್ಥೆ ನಾಸಾಗೆ ತರಬೇತಿಗಾಗಿ ಕಳಿಸಿದರು. ಇವರುಗಳೇ ಮುಂದಿನ ದಶಕದಲ್ಲಿ ಇಸ್ರೊ ಸಂಸ್ಥೆಯ ರಾಕೆಟ್ ಹಾಗೂ ಉಪಗ್ರಹಗಳ ಅಭಿವೃದ್ಧಿಗೆ ಬೆನ್ನೆಲುಬಾದರು. ಆ ಯುವ ವಿಜ್ಞಾನಿಗಳಲ್ಲಿ ಒಬ್ಬರಾಗಿದ್ದವರು ಭಾರತದ ಮಾಜಿ ರಾಷ್ಟ್ರಪತಿ ಡಾ. ಎ ಪಿ ಜೆ ಅಬ್ದುಲ್ ಕಲಂ ಎಂಬುದು, ಯುವಕರಲ್ಲಿದ್ದ

ಪ್ರತಿಭೆಯನ್ನು ಗುರುತಿಸುವುದರಲ್ಲಿ ಸಾರಾಭಾಯಿ ಅವರಿಗಿದ್ದ ಸಾಮರ್ಥ್ಯವನ್ನು ತೋರಿಸುತ್ತದೆ.

ನಂತರ ನಡೆದದ್ದು ಭಾರತದ ಬಾಹ್ಯಾಕಾಶ ಕ್ಷೇತ್ರದ ಸುವರ್ಣ ಇತಿಹಾಸವೆಂದೇ ಹೇಳಬಹುದು. ಆಗ ಸಾರಾಭಾಯಿಯವರು ಕೈಗೊಂಡ ಪ್ರಥಮ ಯೋಜನೆಯಂತೆ ಕೇರಳದ ತಿರುವನಂತಪುರ ಸಮೀಪದ ತುಂಬಾ ಎಂಬಲ್ಲಿ "ತುಂಬಾ ಇಕ್ವಿಟೋರಿಯಲ್ ರಾಕೆಟ್ ಲಾಂಚಿಂಗ್ ಸ್ಟೇಷನ್ (TERLS )"ನ ನಿರ್ಮಾಣ ಕಾರ್ಯ ಆರಂಭವಾಗಿ 1963ರ ನವೆಂಬರ್ 21ರಂದು ಭಾರತದ ಮೊದಲ ಸೌಂಡಿಂಗ್ ರಾಕೆಟ್‌ಅನ್ನು ಉಡಾವಣೆ ಮಾಡಲಾಯಿತು. ಮ್ಯಾಗ್ನೆಟಿಕ್ ಇಕ್ವೇಟರ್ಗೆ ಅತಿ ಸಮೀಪದಲ್ಲಿದ್ದುದರಿಂದ ತುಂಬಾವನ್ನು ಸೌಂಡಿಂಗ್ ರಾಕೆಟ್ಟುಗಳ ಲಾಂಚಿಂಗ್ ಸ್ಟೇಷನ್ ನಿರ್ಮಾಣ ಮಾಡಲು ಆಯ್ಕೆ ಮಾಡಲಾಯಿತು, ಮ್ಯಾಗ್ನೆಟಿಕ್ ಇಕ್ವೇಟರ್, ಹಾಗೂ ಐನೋಸ್ಫಿಯರ್ ಪದರಗಳ ಬಗ್ಗೆ ಹಲವಾರು ವರ್ಷಗಳ ಹಿಂದೆಯೇ ತಮ್ಮ ಪಿ.ಹೆಚ್.ಡಿ ಅಧ್ಯಯನ ವೇಳೆ ವಿಕ್ರಂ ಸಾರಾಭಾಯಿಯವರು ಅಪಾರ ಸಂಶೋಧನೆ ನಡೆಸಿದ್ದರಿಂದ, ಈ ವಿಷಯಗಳಲ್ಲಿ ಅವರಿಗಿದ್ದ ಆಳವಾದ ಜ್ಞಾನ ಸೌಂಡಿಂಗ್ ರಾಕೆಟ್ಟುಗಳ ಉಡಾವಣೆಯು

ಸಫಲವಾಗುವಂತೆ ಮಾಡಿತು. ಸೌಂಡಿಂಗ್ ರಾಕೆಟ್ ಎಂದರೆ ಹಲವು ವೈಜ್ಞಾನಿಕ ಪ್ರಯೋಗಗಳನ್ನು ತನ್ನ ಸಬ್ ಆರ್ಬಿಟಲ್ ಫ್ಲೈಟ್ನಲ್ಲಿ ನಡೆಸುವ ಸಲುವಾಗಿ ಉಪಕರಣಗಳನ್ನು ಕೊಂಡೊಯ್ಯುವ ಪ್ರಾಯೋಗಿಕ ರಾಕೆಟ್. ಸಬ್ ಆರ್ಬಿಟಲ್ ಫ್ಲೈಟ್ ಎಂದರೆ ಭೂಮಿಯನ್ನು ಒಂದು ಸುತ್ತು ಸಹ ಸುತ್ತದೇ ಭೂಮಿಯಿಂದ ಉಡಾವಣೆಯಾಗಿ ಮತ್ತೆ ಭೂಮಿಗೆ ಹಿಂದಿರುಗುವ ರಾಕೆಟಿನ ಪಥ. "ತುಂಬಾ"ದಲ್ಲಿ ವಿಕ್ರಂ ಸಾರಾಭಾಯಿಯವರ ನೇತೃತ್ವದಲ್ಲಿ ಸೌಂಡಿಂಗ್ ರಾಕೆಟ್ ಹಾಗೂ ಬಾಹ್ಯಾಕಾಶ ಬಗೆಗಿನ ಸಂಶೋಧನೆಗಳ ಕಾರ್ಯವು ಶೀಘ್ರವಾಗಿ ನಡೆಯಲಾರಂಭಿಸಿತು.

1965 ಜನವರಿ 1ರಂದು ತುಂಬಾ ಸಮೀಪದ ವೇಲಿ ಎಂಬಲ್ಲಿ ಸ್ಪೇಸ್ ಸೈನ್ಸ್ ಅಂಡ್ ಟೆಕ್ನಾಲಜಿ ಸೆಂಟರ್ (SSTC) (ನಂತರ ಇದನ್ನು ವಿಕ್ರಂ ಸಾರಾಭಾಯಿ ಸ್ಪೇಸ್ ಸೆಂಟರ್ – VSSC ಎಂದು ಪುನರ್ ನಾಮಕರಣ ಮಾಡಲಾಯಿತು) ಎಂಬ ಕೇಂದ್ರವನ್ನು ಸ್ಥಾಪಿಸಲು ಕಾರಣರಾದ ಸಾರಾಭಾಯಿಯವರು ಬಾಹ್ಯಾಕಾಶ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆಗಳು ನಡೆಯುವಂತೆ ಕ್ರಮಗಳನ್ನು ಕೈಗೊಂಡರು. ಏರೋಸ್ಪೇಸ್ ಇಂಜಿನಿಯರಿಂಗ್ ಬಗ್ಗೆ ಸಂಶೋಧನೆ, ಸೌಂಡಿಂಗ್ ರಾಕೆಟ್ ಹಾಗೂ ಉಪಗ್ರಹ

ಉಡಾವಣಾ ರಾಕೆಟ್ಟುಗಳ ವಿನ್ಯಾಸ ಹಾಗೂ ಅಭಿವೃದ್ಧಿ ಕಾರ್ಯಗಳು ಈ ಸಂಸ್ಥೆಯ ಉದ್ದೇಶವಾಗಿತ್ತು.

ಈ ನಡುವೆ 1966 ಜನವರಿ 24ರಂದು ನಡೆದ ವಿಮಾನ ಅಪಘಾತದಲ್ಲಿ ಹೋಮಿ ಜಹಾಂಗಿರ್ ಬಾಬಾ ತೀರಿಹೋದದ್ದು ದೇಶದ ಅಣುಶಕ್ತಿ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ದೊಡ್ಡ ಹಿನ್ನಡೆಯುಂಟಾಯಿತು. ಅಣುಶಕ್ತಿ ಕಮಿಷನ್ನಿನ ಚೇರ್ಮನ್ ಹಾಗೂ ಅಣುಶಕ್ತಿ ಇಲಾಖೆಯ ಕಾರ್ಯದರ್ಶಿಯಾಗಿ ಭಾರತೀಯ ಅಣುಶಕ್ತಿ ಸಂಶೋಧನೆಯ ಸಂಪೂರ್ಣ ಜವಾಬ್ದಾರಿಯನ್ನು ಸಾರಾಭಾಯಿಯವರಿಗೆ ನೀಡಲಾಯಿತು. ಇದೇ ವರ್ಷ, ಅಂದರೆ 1966ರಲ್ಲಿ ಸಾರಾಭಾಯಿಯವರು ಭಾರತ ಸರ್ಕಾರದ ವಿದ್ಯುನ್ಮಾನ ಕಮಿಟಿಗೆ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಲೇ, ಇಂಟರ್ ನ್ಯಾಷನಲ್ ಕೌನ್ಸಿಲ್ ಆಫ್ ಸೈಂಟಿಫಿಕ್ ಯೂನಿಯನಿಗೆ ಭಾರತದ ವತಿಯಿಂದ ಸದಸ್ಯರಾದರು. ಇವುಗಳ ನಡುವೆಯೇ ನೆಹರು ಫೌಂಡೇಷನ್ ಫಾರ್ ಡೆವೆಲೊಪ್ಮೆಂಟ್ ಅಂಡ್ ಕಮ್ಯುನಿಟಿ ಸರ್ವೀಸ್ ಸೆಂಟರ್ ಸಂಸ್ಥೆಯನ್ನು ಸ್ಥಾಪಿಸಿದರು. ಸಾರಾಭಾಯಿಯವರು ದೇಶಕ್ಕೆ ನೀಡುತ್ತಿದ್ದ ಈ ಎಲ್ಲಾ

ಕೊಡುಗೆಗಳನ್ನು ಗುರುತಿಸಿದ ಭಾರತ ಸರ್ಕಾರ ಇವರಿಗೆ 1966ರ ಪದ್ಮ ಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಹಲವು ಕ್ಷೇತ್ರಗಳಲ್ಲಿ ಏಕಸಮಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದ ಸಾರಾಭಾಯಿಯವರು ಭಾರತದ ಅಣುಶಕ್ತಿ ಹಾಗೂ ಬಾಹ್ಯಾಕಾಶ ಸಂಶೋಧನೆಗಳು ಇನ್ನೂ ಹೆಚ್ಚಿನ ವೇಗ ಪಡೆದುಕೊಳ್ಳುವಂತೆ ಹಲವಾರು ಕಾರ್ಯಗಳನ್ನು ಕೈಗೆತ್ತಿಕೊಂಡರು. ಇದೇ ನಿಟ್ಟಿನಲ್ಲಿ ಅಹಮದಾಬಾದಿನಲ್ಲಿ 1967 ಜನವರಿ 1ರಂದು ಭೂಮಿಯಿಂದ ಉಪಗ್ರಹಗಳೊಡನೆ ಸಂವಹನ ನಡೆಸುವ ಸಲುವಾಗಿ ಎಕ್ಸ್ಪರಿಮೆಂಟಲ್ ಸ್ಯಾಟೆಲೈಟ್ ಟೆಲಿಕಮ್ಯುನಿಕೇಷನ್ ಅರ್ಥ್ ಸ್ಟೇಷನ್(ESCES) ಎಂಬ ಭೂಕೇಂದ್ರವನ್ನು ಸ್ಥಾಪಿಸಿದರು. ಇದೇ ವರ್ಷದಲ್ಲಿ ಸಾರಾಭಾಯಿಯವರು ಬಿಹಾರದ ಜಾದುಗುಡದಲ್ಲಿ ಯುರೇನಿಯಮ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಹಾಗೂ ಆಂಧ್ರಪ್ರದೇಶದ ಹೈದರಾಬಾದಿನಲ್ಲಿ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಸಂಸ್ಥೆಗಳನ್ನು ಸ್ಥಾಪಿಸಿದರು.

ಬಾಹ್ಯಾಕಾಶ ಸಂಶೋಧನೆಗಾಗಿ ಸ್ಥಾಪಿಸಲಾದ ಎಸ್.ಎಸ್.ಟಿ.ಸಿಯಲ್ಲಿ ಬಾಹ್ಯಾಕಾಶ ವಿಜ್ಞಾನದ ವಿವಿಧ

ವಿಷಯಗಳ ಪರಿಣಿತರು ಸಂಶೋಧನೆಗಳನ್ನು ಸಾರಾಭಾಯಿಯವರ ಮಾರ್ಗದರ್ಶನದಲ್ಲಿ ಆರಂಭಿಸಿದ್ದರು. ನೋದನ (ಪ್ರೊಪೊಲ್ಷನ್), ಸಂರಚನೆ (ಸ್ಟ್ರಕ್ಚರ್), ಏರೋಡೈನಮಿಕ್ಸ್, ಮೆಟೀರಿಯಲ್ಸ್, ನಿಯಂತ್ರಣ ಹಾಗೂ ಪಥ ನಿರ್ದೇಶನ, ಖಗೋಳ ಶಾಸ್ತ್ರ, ವಿದ್ಯುನ್ಮಾನ, ಸಿಸ್ಟಮ್ ಇಂಜಿನಿಯರಿಂಗ್ ಮೊದಲಾದ ವಿವಿಧ ವಿಭಾಗಗಳಲ್ಲಿ ಭಾರತೀಯರು ಪರಿಣಿತಿ ಹೊಂದುವಲ್ಲಿ ಸಾರಾಭಾಯಿಯವರ ಕೊಡುಗೆ ಅತ್ಯಮೂಲ್ಯವಾಗಿತ್ತು. ಇವರೆಲ್ಲರ ಅವಿರತ ಪ್ರಯತ್ನದ ಫಲವಾಗಿ, ಸಾರಾಭಾಯಿಯವರ ಮಾರ್ಗದರ್ಶನದಲ್ಲಿ 1967ರ ನವೆಂಬರ್ ನಲ್ಲಿ ಮೊದಲ ರೋಹಿಣಿ ರಾಕೆಟ್ (RH-75)ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು.

1968 ಫೆಬ್ರವರಿ 2 ರಂದು ಭಾರತದ ಪ್ರಧಾನಿಯವರು ವಿಕ್ರಂ ಸಾರಾಭಾಯಿಯವರು ಸ್ಥಾಪಿಸಿದ ತುಂಬಾ ಸೌಂಡಿಂಗ್ ರಾಕೆಟ್ ಲಾಂಚಿಂಗ್ ಸ್ಟೇಷನ್ ಅನ್ನು ವಿಶ್ವ ಸಂಸ್ಥೆಗೆ ಅರ್ಪಿಸುವ ಮೂಲಕ, ವಿಶ್ವದಲ್ಲಿ ಬಾಹ್ಯಾಕಾಶ ಸಂಶೋಧನೆಗಳನ್ನು ನಡೆಸುವ ದೇಶಗಳ ಪಟ್ಟಿಯಲ್ಲಿ ಭಾರತವು ಸೇರ್ಪಡೆಗೊಂಡಿತು.

ಇಂದಿನ ಪ್ರತಿ ಭಾರತೀಯನ ಹೆಮ್ಮೆಯ ಸಂಸ್ಥೆಯಾದ ಇಸ್ರೊ(ಇಂಡಿಯನ್ ಸ್ಪೇಸ್ ರಿಸರ್ಚ್ ಆರ್ಗನೈಜೇಷನ್) ಸ್ಥಾಪನೆಯಾದದ್ದು 1969 ಆಗಸ್ಟ್ 15ರಂದು. ಐವತ್ತು ವರ್ಷಗಳ ಹಿಂದೆ ವಿಕ್ರಂ ಸಾರಾಭಾಯಿಯವರ ಅವಿರತ ಪ್ರಯತ್ನದಿಂದ ರೂಪುಗೊಂಡ ಈ ಸಂಸ್ಥೆ ಅಂದಿನಿಂದ ಇಂದಿನವರೆಗೂ ಮಾಡಿದ ಸಾಧನೆ ಅಮೋಘ, ಅಪೂರ್ವ, ಅನನ್ಯ, ಅಪರಿಮಿತ ಎಂದೇ ಹೇಳಬಹುದು. ಇಸ್ರೋದ ಮೊದಲ ಅಧ್ಯಕ್ಷರಾದ ವಿಕ್ರಂ ಸಾರಾಭಾಯಿಯವರ ಮುಂದಿದ್ದ ಸವಾಲುಗಳು ಅಗಾಧವಾಗಿತ್ತು. 1970ರಲ್ಲಿ ವಿಯೆನ್ನಾದಲ್ಲಿ ನಡೆದ 14ನೆಯ ಅಂತರರಾಷ್ಟ್ರೀಯ ಅಣುಶಕ್ತಿ ಏಜೆನ್ಸಿಯ (IAEA) ಸಮ್ಮೇಳನದ ಅಧ್ಯಕ್ಷರಾಗಿದ್ದ ವಿಕ್ರಂ ಸಾರಾಭಾಯಿಯವರು 1970–80ರ ದಶಕದಲ್ಲಿ ಭಾರತ ಅಣುಶಕ್ತಿ ಹಾಗೂ ಬಾಹ್ಯಾಕಾಶ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲು ಬೇಕಾದ ಯೋಜನೆಗಳ ನೀಲ ನಕ್ಷೆಯನ್ನು ಮಂಡಿಸಿದರು. ಇದೇ ವರ್ಷದಲ್ಲಿ ಇಂಡಿಯನ್ ಜಿಯೋಫಿಸಿಕಲ್ ಯೂನಿಯನ್ನಿನ ಅಧ್ಯಕ್ಷರಾದರು. 1971ರಲ್ಲಿ ಅಣುಶಕ್ತಿಯ ಶಾಂತಿಯುತ ಉಪಯೋಗಗಳಿಗಾಗಿ ನಡೆದ 4ನೆಯ ವಿಶ್ವಸಂಸ್ಥೆಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

1947ರಿಂದ ನಿರಂತರವಾಗಿ ಹಲವಾರು ಸಂಸ್ಥೆಗಳನ್ನು, ಕಾರ್ಖಾನೆಗಳನ್ನು, ಸಂಘಟನೆಗಳನ್ನು ಸ್ಥಾಪಿಸಿ, ಅವುಗಳನ್ನು ಯಶಸ್ವಿಯಾಗಿ ಮುನ್ನಡೆಸಿ, ಭಾರತಾದ್ಯಂತ ನಿರಂತರವಾಗಿ ಓಡಾಡುತ್ತಾ ದಿನಕ್ಕೆ ಕೇವಲ ನಾಲ್ಕು ಗಂಟೆ ನಿದ್ದೆ ಮಾಡಿ 20 ಗಂಟೆ ವಿವಿಧ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ ಸಾರಾಭಾಯಿಯವರ ಮನಸ್ಸು ಹಾಗೂ ಮೆದುಳು ಉತ್ತುಂಗದಲ್ಲಿದ್ದರೂ ಹೃದಯ ಹಾಗೂ ದೇಹ ಆ ಒತ್ತಡವನ್ನು ತಡೆದುಕೊಳ್ಳಲಾಗುತ್ತಿರಲಿಲ್ಲ. ಔಷಧಿಗಳನ್ನು ತಯಾರು ಮಾಡುವ ಹಲವಾರು ಕಾರ್ಖಾನೆಗಳನ್ನು ಸ್ಥಾಪಿಸಿದ್ದ ಸಾರಾಭಾಯಿಯವರು ತಮ್ಮ ಆತ್ಮೀಯ ಸಹೋದ್ಯೋಗಿ ಡಾ. ರಾಜಾರಾಮಣ್ಣ ಅವರಲ್ಲಿ ತಮ್ಮ ಒತ್ತಡವನ್ನು ನಿಯಂತ್ರಿಸಲು ಯೋಗ ಕಲಿಯುವ ಇಚ್ಛೆ ವ್ಯಕ್ತಪಡಿಸಿದ್ದು ದಾಖಲಾಗಿದೆ.

ದೆಹಲಿ, ಅಹಮದಾಬಾದ್, ತಿರುವನಂತಪುರಗಳ ಮಧ್ಯೆ ಅವರ ಓಡಾಟ ನಿರಂತರವಾಗಿತ್ತು. 1971 ಡಿಸೆಂಬರ್ 30ರಂದು ತಿರುವನಂತಪುರದ ಕೋವಲಮ್ ಅತಿಥಿಗೃಹದಲ್ಲಿ ವಿಕ್ರಂ ಸಾರಾಭಾಯಿಯವರು ತಮ್ಮ 52ನೆಯ ವಯಸ್ಸಿನಲ್ಲಿ ತೀವ್ರ ಹೃದಯಾಘಾತದಿಂದ ನಿಧನರಾದಾಗ ದೇಶಕ್ಕೇ ದೊಡ್ಡ ಆಘಾತವಾಯಿತು.

ಅಣುಶಕ್ತಿ ಹಾಗೂ ಬಾಹ್ಯಾಕಾಶ ಇಲಾಖೆಗಳ ವಿಜ್ಞಾನಿಗಳು ಗರಬಡಿದಂತಾದರು.ಆದರೆ ವಿಕ್ರಂ ಸಾರಾಭಾಯಿ ಅವರು ತಮ್ಮ ಸಹೋದ್ಯೋಗಿಗಳನ್ನು ಅತ್ಯುತ್ತಮವಾಗಿ ತಯಾರು ಮಾಡಿದ್ದರು. ಅವರ ನಂತರ ಸಂಸ್ಥೆಯನ್ನು, ಸಂಶೋಧನೆಯನ್ನು ಉತ್ತಮವಾಗಿ ನಡೆಸಿಕೊಂಡು ಹೋಗುವ ಸಾಮರ್ಥ್ಯವನ್ನು ಬೆಳೆಸಿದ್ದರು.

ಸಾರಾಭಾಯಿಯವರು ಮಾರ್ಗದರ್ಶನ ನೀಡಿ ರೂಪಿಸಿದ ವಿಜ್ಞಾನಿಗಳು ಇಡೀ ವಿಶ್ವದಲ್ಲೇ ಮೇರು ವ್ಯಕ್ತಿಗಳಾದರು. ಪ್ರೊಫೆಸರ್ ಸತೀಶ್ ಧವನ್, ಪ್ರೊ ಯು ಆರ್ ರಾವ್, ಡಾ. ಎ ಪಿ ಜೆ ಅಬ್ದುಲ್ ಕಲಾಂ, ಡಾ. ರಾಜಾ ರಾಮಣ್ಣ ಮೊದಲಾದವರು, ಸಾರಾಭಾಯಿ ನಂತರದ ಇಸ್ರೊ ಮತ್ತು ಅಣು ಸಂಸ್ಥೆಯನ್ನು ಅಮೋಘವಾಗಿ ಮುನ್ನಡೆಸಿ ಸಾರಾಭಾಯಿಯವರ ಹೆಸರನ್ನು ಭಾರತೀಯ ವಿಜ್ಞಾನ ಕ್ಷೇತ್ರದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯುವಂತೆ ಮಾಡಿದರು.

ವಿಕ್ರಂ ಸಾರಭಾಯಿಯವರು ದೇಶಕ್ಕೆ ನೀಡಿದ ಸೇವೆಗಾಗಿ 1972ರಲ್ಲಿ ಭಾರತ ಸರ್ಕಾರವು ಪದ್ಮ ವಿಭೂಷಣ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಿ ಗೌರವಿಸಿತು. 1974 ಇಂಟರ್ ನ್ಯಾಷನಲ್ ಅಸ್ಟ್ರಾನಾಮಿಕಲ್

ಯೂನಿಯನನಲ್ಲಿ ಚಂದ್ರನ ಮೇಲಿನ ಒಂದು ಕುಳಿಗೆ ವಿಕ್ರಂ ಸಾರಾಭಾಯಿಯವರ ಹೆಸರನ್ನಿಟ್ಟು ಅವರ ಹೆಸರನ್ನು ಅಮರವನ್ನಾಗಿಸಿದರು. ನಂತರದ ದಿನಗಳಲ್ಲಿ ಪ್ರೊ. ಎಂ ಜಿ ಕೆ ಮೆನನ್, ಪ್ರೊ. ಸತೀಶ್ ಧವನ್, ಪ್ರೊ. ಯು ಆರ್ ರಾವ್, ಡಾ. ಕಸ್ತೂರಿ ರಂಗನ್, ಡಾ. ಮಾಧವನ್ ನಾಯರ್, ಡಾ. ಕೆ ರಾಧಾಕೃಷ್ಣನ್, ಶ್ರೀ ಎ ಎಸ್ ಕಿರಣ್ ಕುಮಾರ್ ಡಾ. ಕೆ ಶಿವನ್ ಹಾಗೂ ಇಂದಿನ ಎಸ್.ಸೋಮನಾಥ್ ಅವರುಗಳು ಇಸ್ರೊ ಸಂಸ್ಥೆಯ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ವಿಶಿಷ್ಟವಾಗಿ, ವಿಭಿನ್ನವಾಗಿ ರೂಪಿಸಿ ನಡೆಸಿಕೊಂಡು ಬಂದಿದ್ದಾರೆ. ಅವರುಗಳ ಅದ್ಭುತ ನಾಯಕತ್ವದಲ್ಲಿ ಇಸ್ರೊ ಸಾಧನೆಗಳು ಅದ್ವೀತೀಯವಾಗಿ ಮುಂದುವರೆದಿವೆ.

## 5. ಉಪಸಂಹಾರ

ಅದ್ವಿತೀಯ ವಿಜ್ಞಾನಿ, ತಂತ್ರಜ್ಞ, ಉದ್ಯಮಿ, ಗುಣಗಳಿಂದ ಪೂರಿತವಾದ ವ್ಯಕ್ತಿತ್ವವುಳ್ಳ ಮೇಧಾವಿ ನಮ್ಮ ದೇಶದಲ್ಲಿ ಹುಟ್ಟಿ ನಮ್ಮ ವೈಜ್ಞಾನಿಕ ಜಗತ್ತಿಗೆ ಅಪ್ರತಿಮ ಕೊಡುಗೆ ನೀಡಿರುವುದು ನಮ್ಮ ಅದೃಷ್ಟವೇ ಸರಿ. ಇವರ

ರೂಪು ರೇಖೆಗಳಂತೆ ನಡೆದು ನಾವು ದೇಶದಲ್ಲಿ ವಿಜ್ಞಾನವನ್ನು ಮುಗಿಲೆತ್ತರಕ್ಕೆ ಏರಿಸೋಣ.

—————————————————————

# ಬಾಲಬಾಲೆಯರಿಗೆ ಬಾಹ್ಯಾಕಾಶ ಪುಸ್ತಕ ಮಾಲೆ
# 2022ರ ಪ್ರಕಟಣೆಗಳು

1. ಇಸ್ರೊ–ಸಾಧನೆಯ ಹಾದಿಯಲ್ಲಿ
   ಲೇಖಕರು: ಡಾ. ಬೆ ರಾ ನಾಗೇಂದ್ರ
2. ರಾಕೆಟ್: ಬಾಹ್ಯಾಕಾಶಕ್ಕೆ ರಹದಾರಿ
   ಲೇಖಕರು: ಶ್ರೀ ಆನಂದ ಎಸ್
3. ಡಾ. ವಿಕ್ರಂ ಸಾರಾಭಾಯಿ
   ಲೇಖಕರು: ಶ್ರೀಮತಿ ಪ್ರಿಯಾಂಕ ವಿ
4. ಪ್ರೊ ಸತೀಶ್ ಧವನ್
   (ವಿಜ್ಞಾನಿ, ಗುರು, ಸಂಶೋಧಕ, ಚಿಂತಕ, ಮಾರ್ಗದರ್ಶಕ)
   ಲೇಖಕರು: ಶ್ರೀ ಪ್ರಸಾದ್ ಬಿ ಎಸ್
5. ಬಾಹ್ಯಾಕಾಶ ತ್ಯಾಜ್ಯ
   ಲೇಖಕರು: ಶ್ರೀ ಶಿವಪ್ರಕಾಶ್ ಬಿ
6. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ
   ಲೇಖಕರು: ಶ್ರೀಮತಿ ಉಮಾ ಬಿ ಆರ್
7. ಧೂಮಕೇತುಗಳು–ಬಾಹ್ಯಾಕಾಶದ ಅನಿರೀಕ್ಷಿತ ಅತಿಥಿಗಳು
   ಲೇಖಕರು: ಶ್ರೀಮತಿ ಸೌಭಾಗ್ಯ

# ಬಾಲಬಾಲೆಯರಿಗೆ ಬಾಹ್ಯಾಕಾಶ ಪುಸ್ತಕ ಮಾಲೆ

## ಸಂಪಾದಕೀಯ ಸಮಿತಿ

ರಾಮನಗೌಡ ವಿ ನಾಡಗೌಡ ..ಅಧ್ಯಕ್ಷರು
ಸುರೇಶಕುಮಾರ್ ಹೆಚ್ ಎನ್
ಉಷಾ ಬಂಡಿವಾಡ್
ಶಿವಪ್ರಕಾಶ ಬಿ
ರಮೇಶ ನಾಯ್ಡು ವಿ
ಶ್ರೀನಿವಾಸ ಪ್ರಸಾದ್ ಕೆ
ಜಯಸಿಂಹ ಪಿ
ವಿಠಲ್ ಮೇತ್ರಿ
ಜಗದೀಶ ಬಾಬು ಬಿ ಎಸ್
ಮುರಳೀಧರ ಕೆ ವಿ
ಉಮಾ ಬಿ ಆರ್
ಡಾ. ನಾಗೇಂದ್ರ ಬೆ ರಾ
ಆನಂದ ಎಸ್
ಚಂದ್ರಿಕಾ ಜಿ ಎಲ್
ಪ್ರಿಯಾಂಕ ವಿ
ಸೌಭಾಗ್ಯ ..ಕಾರ್ಯದರ್ಶಿ

## ಕಾರ್ಯಕಾರಿ ಸಮಿತಿ

ಶ್ರೇಯಲಾ ರತ್ನಾಕರ ..ಅಧ್ಯಕ್ಷರು
ವಿಠಲ್ ಮೇತ್ರಿ
ಸತ್ಯನಾರಾಯಣ ಪಿ
ಶ್ರೀರಾಮ್ ಕೆ ಎಸ್
ಸಂಜೀವ್ ಕುಮಾರ್ ಕೆ ಎಸ್.
ಕಟ್ಟಿಮನಿ ಎಸ್ ಎಂ
ಮಾಲತಿ ಎಸ್
ಪ್ರಶಾಂತ್ ಡಿ. ಬಾಗಲಕೋಟ್
ಪ್ರಸಾದ್ ಬಿ ಎಸ್
ವಾಸುದೇವಮೂರ್ತಿ ಸಿ ಎನ್
ಪ್ರಶಾಂತ್ ಎ ಆರ್
ಸುರೇಶ್ ಎಂ. ಹೆಬ್ಬಳ್ಳಿ
ಸೌರಭ್ ಗುಪ್ತ
ಚಂದ್ರಿಕಾ ಜಿ ಎಲ್
ನಳಿನಿ ಇ ಕೆ
ಸುಮಾ ಉಮೇಶ್ ..ಕಾರ್ಯದರ್ಶಿ



ಶ್ರೀಮತಿ ಪ್ರಿಯಾಂಕ ವಿ 2010ರಿಂದ ಯು ಆರ್ ರಾವ್ ಉಪಗ್ರಹ ಕೇಂದ್ರದ ನಿಯಂತ್ರಣ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದಿಂದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದಲ್ಲಿ ಬಿ.ಇ ಪದವಿ ಪಡೆದಿರುತ್ತಾರೆ. ಯು ಆರ್ ರಾವ್ ಉಪಗ್ರಹ ಕೇಂದ್ರದಲ್ಲಿ ನಡೆಸಲಾಗುವ ಕನ್ನಡ ತಾಂತ್ರಿಕ ಕಮ್ಮಟದಲ್ಲಿ ಹಲವಾರು ಲೇಖನಗಳನ್ನು ಮಂಡಿಸಿದ್ದಾರೆ.

**ಬಾಲಬಾಲೆಯರಿಗೆ ಬಾಹ್ಯಾಕಾಶ ಪುಸ್ತಕ ಮಾಲೆ**

**ಯು ಆರ್ ರಾವ್ ಉಪಗ್ರಹ ಕೇಂದ್ರ, ಬೆಂಗಳೂರು–17**